www.questionpaperdownload.com

**KM**

Question Booklet Sl. No. **1008076**

# QUESTION BOOKLET – PAPER – I

**(KANNADA MEDIUM ONLY)**

**SUBJECTS : Language – I, Language – II, Child Development and Pedagogy, Mathematics and Environmental Science**

**Maximum Marks : 150** **09.30 A.M. to 12.00 P.M.** **Max. Time : 2.30 Hours**

SEAL

## INSTRUCTIONS TO THE CANDIDATES (Read Carefully)

**Note : Candidates are instructed to confirm**

- **Whether pre-printed O.M.R. has your name and register number printed on it.**
- **Whether pre-printed O.M.R. Sheet No. and QP Booklet No. are same.**
- **If the candidate uses the O.M.R./QP booklet which doesn't belong to him/her, such O.M.R. sheets are not considered for evaluation.**

1. The sealed Question Booklet contains 150 questions and O.M.R. Answer Sheets. Verify whether the given Question Booklet is of the same PAPER and MEDIUM as the candidate opted in the application.
2. The Questions are printed in Kannada and English Medium. **But in any case of any discrepancies/doubt the question in English Medium is considered as valid.**
3. The Question Paper contains five parts I, II, III, IV and V consisting of **150** Objective Type Questions, **EACH QUESTION CARRYING ONE MARK.**

| Parts | Subjects | Q. No. | Page No. |
|---|---|---|---|
| Part – I | Lang. – I (Kannada, English, Urdu, Tamil, Telugu, Marathi, Hindi, Sanskrit) | 1 to 30 | 2 to 39 |
| Part – II | Lang. – II (Kannada, English, Urdu, Tamil, Telugu, Marathi, Hindi, Sanskrit) | 31 to 60 | 40 to 79 |
| Part – III | Child Development and Pedagogy (Kannada) – III | 61 to 90 | 80 to 84 |
| Part – III | Child Development and Pedagogy (English) – III | 61 to 90 | 85 to 88 |
| Part – IV | Mathematics (Kannada) – IV | 91 to 120 | 89 to 93 |
| Part – IV | Mathematics (English) – IV | 91 to 120 | 94 to 99 |
| Part – V | Environmental Science (Kannada) – V | 121 to 150 | 100 to 104 |
| Part – V | Environmental Science (English) – V | 121 to 150 | 105 to 109 |

4. **Part – I contains 30 Questions for the Language – I and Part – II contains 30 Questions for the Language-II. In this Question Booklet Questions pertaining to all Languages have been given. The Languages being answered must tally with the Languages opted by the candidate in online application.**
5. Candidates are required to attempt Questions in Part – II (Language – II) in any Language other than the Language chosen in the Part-I (Language – I).
6. **Questions related to Part – III : Child Development and Pedagogy (Q. No. 61 to 90), Part – IV : Mathematics (Q. No. 91 to 120) and Part – V : Environmental Science (Q. No. 121 to 150) are given both in Kannada and English medium in the Question Paper Booklet. The Questions answered must tally with the medium opted in the online application.**
7. **All the entries in the circle must be made with BLUE OR BLACK BALL POINT PEN ONLY. Any alteration in the answer counts as invalid. Usage of whitener/overwriting on OMR Answer Sheet is not permitted and such answer booklet is not considered for evaluation.**
8. Each candidate is given carbonless O.M.R. sheet along with the original O.M.R. answer sheet. Candidate should return the **ORIGINAL O.M.R. ANSWER SHEET TO THE ROOM SUPERVISOR** and retain the carbonless copy of the same with the candidate.
9. Calculator, mobile phone and any other electronic devices are not allowed.
10. **If a candidate is found committing malpractice, necessary action will be taken against such candidate as per the examination rules.**

# PART – I

## ಭಾಷೆ – I

## ಕನ್ನಡ

**ಸೂಚನೆ : ಈ ಕೆಳಗಿನ ಗದ್ಯ ಭಾಗವನ್ನು ಓದಿ ಕೊಟ್ಟಿರುವ (1ರಿಂದ 8) ಪ್ರಶ್ನೆಗಳಿಗೆ ಉತ್ತರಿಸಿರಿ :**

ಚಂದ್ರ ಪರ್ವತಗಳ ನಿಜವಾದ ಹೆಸರು 'ರುವೆಂಸೋರಿ' ಎಂದು. ಚಂದ್ರ ಪರ್ವತಗಳ ತಪ್ಪಲಿನಲ್ಲಿ ವಾಸವಾಗಿರುವ ಬಾಂಟೂ ಜನರ ಭಾಷೆಯಲ್ಲಿ ರುವೆಂಸೋರಿ ಎಂದರೆ ಮಳೆಯ ತವರು ಎಂದು. ಈ ಪರ್ವತಗಳು ಉಗಾಂಡ ಮತ್ತು ಜೈರೇ ರಾಜ್ಯಗಳ ಗಡಿಯಲ್ಲಿ ಅರವತ್ತು ಮೈಲು ಉದ್ದಕ್ಕೆ ಹಬ್ಬಿವೆ. ಚಂದ್ರ ಪರ್ವತಗಳ ಆಜುಬಾಜಿನಲ್ಲಿ ಇನ್ನೂ ಹಲವಾರು ಪರ್ವತ ಶ್ರೇಣಿಗಳು ಹಬ್ಬಿವೆ. ಇವುಗಳಲ್ಲಿ ಮೌಂಟ್ ಕಿಲಿಮಂಜಾರೋ ಮತ್ತು ಮೌಂಟ್ ಕೆನ್ಯಾ ಪ್ರಧಾನವಾದವು. ಆದರೆ ಈ ಪರ್ವತ ಶ್ರೇಣಿಗಳು ಒಂದಾನೊಂದು ಕಾಲದಲ್ಲಿ ಅಗ್ನಿಪರ್ವತಗಳಾಗಿದ್ದು, ಜ್ವಾಲಾಮುಖಿ ಚಟುವಟಿಕೆಗಳಿಂದ ರೂಪುಗೊಂಡವು. ಈಗ ತಣ್ಣಗಾಗಿದ್ದರೂ ಇವು ಬಹು ಹಿಂದೆ ಭೀಕರ ಜ್ವಾಲಾಮುಖಿಗಳಾಗಿದ್ದವು. ಆದರೆ ಚಂದ್ರ ಪರ್ವತಗಳು ರೂಪುಗೊಂಡಿದ್ದಕ್ಕೆ ಜ್ವಾಲಾಮುಖಿಗಳು ಕಾರಣವಲ್ಲ. ಇವು ಆಫ್ರಿಕಾದ ಮಧ್ಯ ಭಾಗದಲ್ಲಿ ಹಾದುಹೋಗುವ ಭೂ ಖಂಡಗಳ ಬಿರುಕುಗಳಿರುವಲ್ಲಿ ಉದ್ಭವಿಸಿವೆ. ಇವೂ ಸಹ ಭಾರತದ ಹಿಮಾಲಯದಂತೆಯೇ ಭೂ ಖಂಡಗಳು ಒಂದನ್ನೊಂದು ಒತ್ತುವುದರಿಂದ ಮೇಲೆದ್ದಿರುವ ಪರ್ವತಗಳು.

ರುವೆಂಸೋರಿ ಪರ್ವತದಲ್ಲಿ ವಿಶಿಷ್ಟವಾದ ಊಸರವಳ್ಳಿ ವಾಸವಾಗಿದೆ. ಇದಕ್ಕೆ ಮುಖದ ಮೇಲೆ ಮೂರು ಕೊಂಬುಗಳಿವೆ. ರುವೆಂಸೋರಿ ತಪ್ಪಲಿನಲ್ಲಿ ವಾಸವಾಗಿರುವ ಬಾಂಟೂ ಬುಡಕಟ್ಟಿನವರು ಈ ಪರ್ವತಗಳು ಪಿಶಾಚಿಗಳ ಆಗರವೆಂದು ತಿಳಿದಿದ್ದಾರೆ. ಅಲ್ಲಿರುವ ಮೃತಾತ್ಮಗಳು ಈ ಊಸರವಳ್ಳಿಗಳ ರೂಪದಲ್ಲಿ ಅಡ್ಡಾಡುತ್ತವೆಂದು ಭಾವಿಸಿರುವ ಅವರು ಇವನ್ನು ಕಣ್ಣಿನಿಂದ ನೋಡಲು ಅಂಜುತ್ತಾರೆ ! ಈ ಹಲವು ಜೀವಿಗಳನ್ನು ಬಿಟ್ಟರೆ ಅಲ್ಲಿ ವಿಶಿಷ್ಟವಾದ ಪ್ರಾಣಿ ಸಮುದಾಯ ಯಾವುದೂ ಇಲ್ಲ.

1. ರುವೆಂಸೋರಿ ಪರ್ವತದಲ್ಲಿ ವಾಸವಾಗಿರುವ ವಿಶಿಷ್ಟವಾದ ಊಸರವಳ್ಳಿ ಮುಖದ ಮೇಲೆ ಎಷ್ಟು ಕೊಂಬುಗಳಿವೆ ?
   (1) 4 ಕೊಂಬು (2) 6 ಕೊಂಬು (3) 5 ಕೊಂಬು (4) 3 ಕೊಂಬು

2. ಚಂದ್ರ ಪರ್ವತಗಳ ತಪ್ಪಲಿನಲ್ಲಿ ವಾಸವಾಗಿರುವ ಜನರು
   (1) ಸುಮೇರಿನ್ ಜನರು (2) ಬಾಂಟೂ ಜನರು
   (3) ನಿಗ್ರೋೕ ಜನರು (4) ಮ್ಯಾಂಗೋಲಾಯ್ಡ್ ಜನರು

3. ಚಂದ್ರ ಪರ್ವತಗಳ ನಿಜವಾದ ಹೆಸರು
   (1) ರುವೆಂಸೋರಿ (2) ಕಿಲಿಮಂಜಾರೋ (3) ಜೈರೇ (4) ಉಗಾಂಡ

4. ಬಾಂಟೂ ಬುಡಕಟ್ಟಿನ ಜನರು 'ರುವೆಂಸೋರಿ' ಪರ್ವತವನ್ನು ಹೀಗೆಂದು ತಿಳಿದಿದ್ದಾರೆ.
   (1) ಮುಂಗಾರು ತವರು (2) ಮಳೆಯ ತವರು
   (3) ಪಿಶಾಚಿಗಳ ಆಗರ (4) ದೇವತೆಗಳ ಆಗರ


www.questionpapersdownload.com

5. ಬಾಂಟೂ ಜನರು ಏಕೆ ಊಸರವಳ್ಳಿಗಳನ್ನು ನೋಡಲು ಅಂಜುತ್ತಾರೆ ?
(1) ಮೃತಾತ್ಮರು ದೇವರುಗಳ ರೂಪದಲ್ಲಿ ಅಡ್ಡಾಡುತ್ತಾರೆ ಎಂದು
(2) ಮೃತಾತ್ಮರು ಕಾಗೆಗಳ ರೂಪದಲ್ಲಿ ಅಡ್ಡಾಡುತ್ತಾರೆ ಎಂದು
(3) ಮೃತಾತ್ಮರು ನಾಯಿಗಳ ರೂಪದಲ್ಲಿ ಅಡ್ಡಾಡುತ್ತಾರೆ ಎಂದು
(4) ಮೃತಾತ್ಮರು ಊಸರವಳ್ಳಿಗಳ ರೂಪದಲ್ಲಿ ಅಡ್ಡಾಡುತ್ತಾರೆ ಎಂದು

6. ಬಾಂಟೂ ಜನರ ಭಾಷೆಯಲ್ಲಿ 'ರುವೆಂಸೋರಿ' ಎಂದರೆ
(1) ಮಳೆಯ ತವರು (2) ಪಿಶಾಚಿಗಳ ತವರು (3) ದೇವತೆಗಳ ತವರು (4) ಮೌಂಟ್‌ಕೆನ್ಯಾ ತವರು

7. ಉಗಾಂಡ ಮತ್ತು ಜೈರೇ ರಾಜ್ಯಗಳ ಗಡಿಯಲ್ಲಿ ಎಷ್ಟು ಮೈಲು ಉದ್ದಕ್ಕೆ ಈ ಪರ್ವತಗಳು ಹಬ್ಬಿವೆ ?
(1) 70 ಮೈಲುಗಳು (2) 80 ಮೈಲುಗಳು
(3) 60 ಮೈಲುಗಳು (4) 50 ಮೈಲುಗಳು

8. 'ಒಂದನ್ನೊಂದು' ಪದವು ಈ ಸಂಧಿಗೆ ಉದಾಹರಣೆ.
(1) ಗುಣ ಸಂಧಿ (2) ಆದೇಶ ಸಂಧಿ (3) ಜಸ್ತ್ವ ಸಂಧಿ (4) ಲೋಪ ಸಂಧಿ

**ಸೂಚನೆ : ಈ ಕೆಳಗಿನ ಪದ್ಯ ಭಾಗವನ್ನು ಓದಿಕೊಂಡು ಕೊಟ್ಟಿರುವ (9 ರಿಂದ 15) ಪ್ರಶ್ನೆಗಳಿಗೆ ಉತ್ತರಿಸಿರಿ :**

ಅತೃಪ್ತಿಯನೆ ನಾನು ನೀರಡಿಸಿ ಕುಡಿದಿರುವೆ
ಹೊಟ್ಟೆ ನಗಾರಿಯೊಲು ಬಿಗಿದು ಹೋಗಿಹುದು
ನೀ ತಿರಸ್ಕರಿಸಿ ಎದ್ದು ಬಾರಿಸಿದಾಗ
ಢಣ ಢಣಣ . . . ಢಣ ಢಣಣ . . .
ಕವಿತೆಗಳ ಉಸುರುವೆನು
ನಿನ್ನ ತೃಪ್ತಿಗೆ ಎಂದು.

ಬೆಂಕಿಯನು ಮೈತುಂಬ ಬಳಿದುಕೊಂಡುದರಿಂದ
ಒಳಗೆ ಬೆಂಕಿಯ ರಕುತ ಕತಕತನೆ ಕುದಿಯುತಿದೆ
ತಿಂದ ಅನ್ನದ ರಸವು ಲಾವಾರಸ.

ಮೈಗೆ ಹಚ್ಚಿದ ಗಂಧ,
ಹೂವುಗಳ ಮಕರಂದ,
ನಿನ್ನ ಮುಖ ಮೈ ಅಂದ
ಸೋರಿ ಹೋಗುವುದೆಲ್ಲ
ಆಕಾಶಕೆನೆ ದೊಡ್ಡ ತೂತೊಂದು ಬಿದ್ದು.

ಮಹಾಪೂರದೀ ಭರಭರಾಟದಲಿ
ಬದುಕು ಮೂರಾಬಟ್ಟೆ,
ಕುದಿವ ಸುಣ್ಣದ ಭಟ್ಟಿಯೊಳು ನಡುವೆ
ಸಿಕ್ಕು ಬೋರಾಡುತಿಹ ಕೂಸಿನಂತೆ.


www.questionpapersdownload.com

9. ಕವಿ ನೀರಡಿಸಿ ಕುಡಿದಿರುವುದು

(1) ತೃಪ್ತಿ (2) ಅತೃಪ್ತಿ (3) ಗಾಳಿ (4) ನೀರು

10. ಕವಿ ಕವಿತೆಗಳನ್ನು ಉಸುರುವುದು ಇವರ ತೃಪ್ತಿಗಾಗಿ

(1) ನನ್ನ ತೃಪ್ತಿಗೆ (2) ನಿನ್ನ ತೃಪ್ತಿಗೆ (3) ಹೊಟ್ಟೆ ತೃಪ್ತಿಗೆ (4) ನನ್ನ ಅತೃಪ್ತಿಗೆ

11. ನಗಾರಿಯೊಲು ಬಿಗಿದು ಹೋಗಿರುವುದು

(1) ಮೈ (2) ಕೈಕಾಲು (3) ಮುಖ (4) ಹೊಟ್ಟೆ

12. ತಿಂದ ಅನ್ನದ ರಸವು ಹೀಗಾಗಿದೆ

(1) ಲಾವಾರಸ (2) ರಕ್ತ (3) ಲಾಲಾರಸ (4) ನೀರು

13. ಬೆಂಕಿಯ ರಕುತ ಕತಕತನೆ ಕುದಿಯುವುದು

(1) ಬೆಂಕಿಯನು ತಿಂದಾಗ (2) ಬೆಂಕಿಯನು ಉಗುಳಿದಾಗ

(3) ಬೆಂಕಿಯನು ಮೈತುಂಬ ಬಳಿದುಕೊಂಡಾಗ (4) ಬೆಂಕಿಯನು ಹಚ್ಚಿದಾಗ

14. 'ಮಕರಂದ' ಪದದ ಅರ್ಥ

(1) ದುಂಬಿ (2) ಲಾಲಾರಸ (3) ತೋರಣ (4) ಹೂವಿನ ರಸ

15. ಮಹಾಪೂರದೀ ಭರಭರಾಟೆಯಲಿ ಬದುಕು ಹೀಗಾಗಿದೆ.

(1) ಮೂರಾಬಟ್ಟೆ (2) ಕುದಿವ ಸುಣ್ಣ (3) ಆಕಾಶ (4) ಲಾವಾರಸ

16. ಒಬ್ಬ ವಿದ್ಯಾರ್ಥಿಯ ಆಲಿಸುವಿಕೆಯ ಪ್ರಕ್ರಿಯೆಯು ಇದರಿಂದ ಪೂರ್ಣಗೊಳ್ಳುವುದಿಲ್ಲ.

(1) ಮಾನಸಿಕ ಏಕಾಗ್ರತೆಯಿಂದ ಕೇಳುವುದು

(2) ಉಪನ್ಯಾಸ, ತರ್ಕ ಮತ್ತು ಭಾಷಣಗಳನ್ನು ಕೇಳಿ ಅರ್ಥ ಮಾಡಿಕೊಳ್ಳುವುದು

(3) ಕಿವಿಗೆ ಯಾಂತ್ರಿಕವಾಗಿ ಬೀಳುವ ಶಬ್ದಗಳನ್ನು ಕೇಳುವುದು

(4) ಆಲಿಸುವಾಗ ಪದಗಳು ಮತ್ತು ವಾಕ್ಯಗಳ ಭಾವಾರ್ಥ, ಸಾಂದರ್ಭಿಕ ಅರ್ಥ ಗ್ರಹಿಸುವುದು

17. ಉತ್ತಮ ಮಾತುಗಾರಿಕೆಯ ಲಕ್ಷಣಗಳಲ್ಲಿ ಇದು ಒಂದಾಗಿದೆ.

(1) ಅಲ್ಪ ಪ್ರಾಣ, ಮಹಾಪ್ರಾಣಗಳನ್ನು ಸಂದರ್ಭಕ್ಕೆ ತಕ್ಕಂತೆ ಬಳಸದಿರುವುದು

(2) ಸುಸ್ಪಷ್ಟ, ನಿರರ್ಗಳ ಉಚ್ಚಾರ, ಮಾತಿನ ಅರ್ಥಕ್ಕೆ ಅನುಗುಣವಾಗಿ ಧ್ವನಿಯ ಏರಿಳಿತ, ಮುಖಭಾವಗಳು ವ್ಯಕ್ತವಾಗಬೇಕು

(3) ಒಂದೇ ಪದ ಅಥವಾ ಅಕ್ಷರಗಳನ್ನು ಪುನಃ ಪುನಃ ಉಚ್ಚರಿಸುವುದು

(4) ಅಕ್ಷರಗಳು ಹಾಗೂ ಪದಗಳನ್ನು ಅರ್ಥವಿಲ್ಲದಂತೆ ಕೂಡಿಸಿ ಮಾತನಾಡುವುದು

**18.** ತಲಕಟ್ಟು, ಏತ್ವ, ದೀರ್ಘ, ಕೊಂಬು, ಐತ್ವ, ಅರ್ಕಾವತ್ತು ಮುಂತಾದವುಗಳನ್ನು ಸರಿಯಾಗಿ ಸೇರಿಸದೆ ಇರುವುದು

(1) ಆಲಿಸುವಿಕೆಯ ದೋಷ
(2) ಮಾತುಗಾರಿಕೆಯ ದೋಷ
(3) ಓದುಗಾರಿಕೆಯ ದೋಷ
(4) ಬರೆವಣಿಗೆಯ ದೋಷ

**19.** ಛಂದೋನಿಯಮಗಳಿಗೆ ಒಳಪಡದೆ ಶಿಷ್ಟ ಭಾಷೆಯಲ್ಲಿ ಮತ್ತು ಅರ್ಥಬದ್ಧವಾಗಿ ತರ್ಕಬದ್ಧವಾಗಿ ವಾಕ್ಯ ಸರಣಿಗಳ ಮೂಲಕ ಸುಸಂಬದ್ಧವಾಗಿ ರಚಿಸಿರುವ ಪಠ್ಯವೇ

(1) ವಚನ
(2) ರಗಳೆ
(3) ಕಂದ
(4) ಷಟ್ಪದಿ

**20.** ತರಗತಿಯಲ್ಲಿ ಶಿಕ್ಷಕರು ಗದ್ಯಪಾಠವನ್ನು ಬೋಧಿಸುವಾಗ ಈ ವಿಷಯದ ಕಡೆಗೆ ಹೆಚ್ಚು ಲಕ್ಷ್ಯವಹಿಸಬೇಕು.

(1) ಗದ್ಯವನ್ನು ಬಿಡಿ ಬಿಡಿಯಾಗಿ ಬೋಧಿಸಬೇಕು
(2) ಮೌನ ವಾಚನಕ್ಕೆ ಹೆಚ್ಚು ಮಹತ್ವ ನೀಡಬೇಕು
(3) ಪರಸ್ಪರ ಸಂಬಂಧ ಕಲ್ಪಿಸುತ್ತಾ, ನಿರಂತರತೆ ಮತ್ತು ಸಮಗ್ರತೆಯನ್ನು ಕಾಯ್ದುಕೊಳ್ಳಬೇಕು
(4) ಗದ್ಯ ಬೋಧನೆಯಲ್ಲಿ ಕಪ್ಪು ಹಲಗೆಯನ್ನು ಪರಿಣಾಮಕಾರಿಯಾಗಿ ಬಳಸಬಾರದು

**21.** 'ಮೂರ್ತದಿಂದ ಅಮೂರ್ತದ ಕಡೆಗೆ' ಸಾಗುವ ಬೋಧನಾ ಪದ್ಧತಿ

(1) ನಿಗಮನ ಪದ್ಧತಿ
(2) ಅನುಗಮನ ಪದ್ಧತಿ
(3) ಕಂಠಪಾಠ ಪದ್ಧತಿ
(4) ಹಿರೇಮಣಿ ಪದ್ಧತಿ

**22.** ನಿಮ್ಮ ತರಗತಿಯ 'ಓಂಕಾರ' ಎನ್ನುವ ವಿದ್ಯಾರ್ಥಿ 'ಅಕ್ಷರ, ಪದಗಳನ್ನು ಸುಸಂಬದ್ಧವಾಗಿ ಜೋಡಿಸದೇ ಬರೆಯುತ್ತಾನೆ.' ಈ ಸಮಸ್ಯೆಯನ್ನು ಹೇಗೆ ಪರಿಹರಿಸುವಿರಿ ?

(1) ಕಂಠಪಾಠದ ಮೂಲಕ
(2) ಕ್ರಿಯಾ ಸಂಶೋಧನೆಯ ಮೂಲಕ
(3) ಪ್ರಾಯೋಗಿಕ ಪದ್ಧತಿಯ ಮೂಲಕ
(4) ಬಾಯ್ದೆರೆ ಓದುವಿನ ಮೂಲಕ

**23.** ನಿರಂತರ ಮೌಲ್ಯಮಾಪನ ಎಂದರೆ

(1) ಮಕ್ಕಳ ಸರ್ವತೋಮುಖ ವಿಕಾಸವನ್ನು ಗಮನದಲ್ಲಿಟ್ಟುಕೊಂಡು ಪಠ್ಯ ಮತ್ತು ಪಠ್ಯೇತರ ಎರಡೂ ಕ್ಷೇತ್ರಗಳಲ್ಲಿ ಕಲಿಕೆಯ ಸಾಧನೆಯ ಮಟ್ಟವನ್ನು ಮೌಲ್ಯಮಾಪನ ಮಾಡುವುದು
(2) ರಸ ಪ್ರಶ್ನೆ ಕಾರ್ಯಕ್ರಮ
(3) ಘಟಕ ಪರೀಕ್ಷೆ
(4) ಬೋಧನೆಯ ಜೊತೆಯಲ್ಲಿಯೇ ಔಪಚಾರಿಕವಾಗಿ ಮತ್ತು ಅನೌಪಚಾರಿಕವಾಗಿ ಮೌಲ್ಯಮಾಪನ ಮಾಡುವುದು

24. ಪಾಠದ ಕಡೆ ವಿದ್ಯಾರ್ಥಿಗಳ ಗಮನ ಸೆಳೆದು, ಅದನ್ನು ಉಳಿಸಿಕೊಳ್ಳಲು ಅಧ್ಯಾಪಕರ ವರ್ತನೆಯಲ್ಲಿ ಆಗುವ ಉದ್ದೇಶಪೂರ್ವ ಬದಲಾವಣೆಯ ಕೌಶಲ.

(1) ಪ್ರಚೋದನೆ ಬದಲಾವಣೆಯ ಕೌಶಲ
(2) ನಿದರ್ಶನಗಳೊಂದಿಗೆ ವಿಶದೀಕರಿಸುವ ಕೌಶಲ
(3) ಪಾಠ ಪರಿಚಯಿಸುವ ಕೌಶಲ
(4) ವಿವರಣಾ ಕೌಶಲ

25. ನಾಟಕ ಬೋಧನೆಗೆ ಕೆಳಗಿನ ಈ ಹೇಳಿಕೆ ಅನ್ವಯಿಸುವುದಿಲ್ಲ.

(1) ಆಂಗಿಕ, ವಾಚಕ, ಸಾತ್ತ್ವಿಕ ಗುಣಗಳು ಮೇಳೈಸಿದ ಒಂದು ಕಲೆ
(2) ಪಠ್ಯ ಮತ್ತು ಪ್ರದರ್ಶನಗಳ ಸಮನ್ವಯ
(3) ಪರಿಷ್ಕರಣ, ಸಂಪಾದನ ಕೌಶಲಗಳ ಮಹತ್ವ
(4) ಸಂಭಾಷಣೆ ಪ್ರಧಾನವಾದ ಸೃಜನಾತ್ಮಕ ಸಾಹಿತ್ಯ

26. 'ಪಂಚಮಿ' ವಿಭಕ್ತಿಯ ಕಾರಕಾರ್ಥವಿದು.

(1) ಸಂಪ್ರದಾನ
(2) ಅಪಾದಾನ
(3) ಸಂಬಂಧ
(4) ಅಧಿಕರಣ

27. ಕ್ರಿಯಾಪದದ ಸ್ಥಾನದಲ್ಲಿ ನಿಂತು ವಾಕ್ಯದ ಅರ್ಥವನ್ನು ಪೂರ್ಣಗೊಳಿಸುವ ಅವ್ಯಯ

(1) ಸಾಮಾನ್ಯಾರ್ಥಕಾವ್ಯಯ
(2) ಭಾವಸೂಚಕಾವ್ಯಯ
(3) ಕ್ರಿಯಾರ್ಥಕಾವ್ಯಯ
(4) ಸಂಬಂಧಾರ್ಥಕಾವ್ಯಯ

28. ಒಂದು ಅಥವಾ ಅನೇಕ ವಾಕ್ಯಗಳು ಒಂದು ಪ್ರಧಾನ ವಾಕ್ಯಕ್ಕೆ ಅಧೀನವಾಗಿದ್ದರೆ ಅಂತಹ ವಾಕ್ಯವನ್ನು

(1) ಸಂಯೋಜಿತ ವಾಕ್ಯ
(2) ಸಾಮಾನ್ಯ ವಾಕ್ಯ
(3) ಪ್ರಶ್ನಾರ್ಥಕ ವಾಕ್ಯ
(4) ಮಿಶ್ರ ವಾಕ್ಯ

29. ಒಂದು ವಿಶೇಷಾರ್ಥವನ್ನು ವ್ಯಕ್ತಪಡಿಸುವುದಕ್ಕಾಗಿ ಒಂದು ಪದವನ್ನೊ, ಒಂದು ವಾಕ್ಯವನ್ನೊ ಎರಡೆರಡು ಸಲ ಪ್ರಯೋಗ ಮಾಡುವುದಕ್ಕೆ

(1) ಜೋಡುನುಡಿ
(2) ದ್ವಿರುಕ್ತಿ
(3) ಅನುಕರಣಾವ್ಯಯ
(4) ಪ್ರತಿಧ್ವನಿ

30. ಆತ್ಮಾರ್ಥಕ ಸರ್ವನಾಮಕ್ಕೆ ಉದಾಹರಣೆಯಾದ ಪದಗಳಿವು

(1) ತಾನು, ತಾವು
(2) ಅವನು, ಅವಳು
(3) ನಾನು, ನಾವು
(4) ನೀನು, ನೀವು

## PART – I
## Language – I
## ENGLISH

**Read the given passage and answer the questions that follow (Q. No. 01 – 08) :**

Vivek was a pot maker. He had a smiling face, soothing voice and skilled hands. He loved his village and the villagers loved him. He loved to work and never got tired. He knew his village in all its glory and knew everything that belonged to the village. Not only did he know the trees of the village but also the birds that would come to the trees. He believed that the plants, trees and birds knew him. One day he was busy finishing a pot when a woodpecker flew into his workshop and perched on a pot. He did not want to shoot the bird. As it was still wet, its feet got stuck. It tried to adjust and moved round on the neck of the pot. As it wriggled around, it made a design on the top of the pot and then it flew away. A customer came by. He was impressed by the new design and asked him to make ten such pots for him. Another person came and asked him to make a few more pots. This made him happy and his business improved by leaps and bounds. He was happy that his friend had visited him.

**1.** The false statement about Vivek among the following statements is
(1) Vivek had a smiling face
(2) He had a soothing voice
(3) He did not love his village
(4) He never got tired

**2.** Vivek believed that
(1) The plants, trees and birds knew him
(2) He would never be friendly with the villagers
(3) The villagers hate him
(4) His business would never improve

**3.** He was happy that his friend had visited him. Here 'his friend' is
(1) A villager
(2) The woodpecker
(3) A customer
(4) Another pot maker from the village

4. This made him happy and his business improved by leaps and bounds. This was because
(1) Of the design made by the woodpecker
(2) Of the pots made by him
(3) Of the love showed by trees
(4) Of the new design that he created

5. He did not want to shoot the bird because
(1) He loved it
(2) He knew that it would make a design on the top of the pot
(3) He thought that it would go away after sometime
(4) Perching on an unburnt pot was not a big loss for him

6. The word in the passage which means "twist and turn with quick movements" is
(1) Impressed (2) Perched (3) Moved (4) Wriggled

7. A customer came and asked him to make ten such pots for him.
'To infinitive' in the above sentence is
(1) Make (2) Came (3) To make (4) Asked

8. He was impressed by the new design. This can be written in active voice as
(1) The new design impressed him
(2) The new design will impress him
(3) The new design was impressing him
(4) The new design is impressing him

**Read the given poem and answer the questions that follow (Q. No. 9 – 15) :**

Often seen as filth
But gives the soil good health
To reward the farmer with wealth
Ploughs the soil before farmer
Use not the chemicals to harm her
Please praise our motherland's armour
Shy to show his looks
Toils often on fishing hooks
To give the fisher something to cook
Be humble like a worm
Think no one to harm
You will be free to spread your charm

9. The worm gives the soil
(1) Good colour (2) Good smell
(3) Good health (4) Good wealth

10. 'Please praise our motherland's armour.' The 'armour' is
(1) Worm (2) Farmer
(3) Poet (4) Fisherman

11. 'Toils often on fishing hooks.' Here 'toil' means
(1) Spends time (2) Very lazy often
(3) Works hard (4) Does not work

12. The farmer's friend in this poem is the
(1) Birds (2) Earthworm (3) Land (4) Fisherman

13. According to the poem, we may harm the land by
(1) Ploughing (2) Growing crops
(3) Using chemicals (4) Sowing seeds

14. According to this poem, we can spread our charm by
(1) Being proud (2) Not being proud
(3) Being lazy (4) Not being lazy

15. 'Be humble like a worm'. The figure of speech used here is
(1) Simile (2) Alliteration
(3) Metaphor (4) Personification

16. Karana : Hi Siri, I didn't see you yesterday in the school.
Siri : Yes, I was absent. I had gone to my grandma's house yesterday.
The correct question to get the underlined sentence as answer is
(1) How did you go yesterday ?
(2) Why did you go to grandma's house ?
(3) What did you do in grandma's house ?
(4) Where had you gone yesterday ?

17. Find the correct sequence of sentence.

P. boy walked

Q. a

R. empty house

S. into an

(1) Q P R S (2) Q S P R (3) P Q S R (4) Q P S R

18. Suma is ________ of staying at home.

The correct form of word to be used to complete the sentence is

(1) Bore (2) Boredom (3) Bored (4) Boring

19. '________ it was expensive, Junaid flew to Chennai'.

The correct word to be filled in the blank is

(1) Despite (2) Although (3) Because (4) However

20. Pooja was filled ________ surprise, when her name was called out.

The correct preposition to be filled in the blank is

(1) To (2) From (3) By (4) With

21. One of the important tasks of a teacher in communicative language teaching is to

(1) Collect information about the social background of the learners
(2) Determine the language needs of the learners
(3) Provide suitable classrooms to the learners
(4) Send progress reports to the learners

22. The most obvious characteristic of the teaching/learning process in the CLT is that

(1) Everything is done with a communicative intent
(2) Everything is done with a comprehensive intent
(3) Everything is done in a cognitive intent
(4) Everything is done in a coherent intent

23. Teaching Learning Materials (TLM's) are used by the teachers to

(1) Make the learning real, practical and fun for children
(2) Make the work easier for teachers
(3) Make parents spend their time and money on TLM's
(4) Decorate the classrooms

24. Work books reinforce learning. They promote
(1) Doing homework
(2) Vocabulary building
(3) Self learning
(4) Multimedia use

25. The method in which students are helped to read sets of words that contain the same vowel sound is
(1) Sound method
(2) Phonic method
(3) Word method
(4) Read method

26. An approach evolved through the combination of certain aspects of the direct method, the oral approach and audio lingualism came to be known as SOS approach in India. 'SOS' stands for
(1) Syntax – Open – Situational
(2) Structural – Open – Situational
(3) Structural – Oral – Syntax
(4) Structural – Oral – Situational

27. Using a word bank and brain storming help in building
(1) Listening skills
(2) Vocabulary
(3) Writing skills
(4) Critical thinking

28. Mrs. Mary is a language teacher. She wants to present abstract ideas in visual form. Which one of the following can be used by her ?
(1) Radio
(2) TPR activities
(3) Language games
(4) Charts and flash cards

29. In language teaching 'ELT' stands for
(1) English Language Teaching
(2) English Language Teacher
(3) English Language Training
(4) English Language Test

30. The teacher uses minimal pair of words such as 'ship/sheep' and 'leave/live' to get his/her students to
(1) Learn vocabulary
(2) Drill for spellings
(3) Develop speaking skills
(4) Hear the difference in pronunciation between words

## PART – II

### ಭಾಷೆ – II

### ಕನ್ನಡ

**ಸೂಚನೆ : ಈ ಕೆಳಗೆ ಕೊಟ್ಟಿರುವ ಗದ್ಯ ಭಾಗವನ್ನು ಓದಿ ಕೇಳಿರುವ ಪ್ರಶ್ನೆಗಳಿಗೆ ಉತ್ತರಿಸಿರಿ. (31 – 38) :**

ಅಮೆಜಾನ್ ಜಲಾನಯನ ಪ್ರದೇಶದ ಕಾಡು ಭೂಮಂಡಲದ ಮೇಲಿನ ಅತಿದೊಡ್ಡ ನಿತ್ಯಹರಿದ್ವರ್ಣದ ಕಾಡು ಎಂದು ಹೇಳಬಹುದು. ಕೊಲಂಬಿಯ ವೆನಿಜೂಲ ಪನಾಮಾದಿಂದ ಹಿಡಿದು ಬ್ರೆಜಿಲ್‌ನ ಅಮೆಜಾನ್ ಮುಖಜ ಭೂಮಿಯವರೆಗೂ ಇದು ಹಬ್ಬಿದೆ.

ಭಾರತ ಮಲಯ ಸುಮಾತ್ರ ವಿಯತ್ನಾಂ ದೇಶಗಳಲ್ಲಿರುವ ಕಾಡುಗಳನ್ನು ಮಾನ್‌ಸೂನ್ ಕಾಡುಗಳೆಂದು ಕರೆಯುತ್ತಾರೆ. ಮಳೆಗಾಲ ಮುಗಿದ ನಂತರ ಇವು ಕೆಲವು ಕಾಲ ಮಳೆ ಇಲ್ಲದ ಬೇಸಿಗೆಯನ್ನು ಎದುರಿಸಬೇಕಾಗುತ್ತದೆ. ಈ ಮೂರು ಪರಿಸರಗಳಲ್ಲಿರುವ ಉಷ್ಣವಲಯದ ಕಾಡುಗಳ ರಚನೆ ಹೆಚ್ಚು ಕಡಿಮೆ ಒಂದೇ ರೀತಿ ಎನ್ನಬಹುದು. ಸುಮಾರು ಮುನ್ನೂರು ಅಡಿ ಎತ್ತರದವರೆಗೂ ಮರಗಳು ಇಲ್ಲಿ ಬೆಳೆಯುತ್ತವಾದರೂ ಸರಾಸರಿ ಇನ್ನೂರು ಅಡಿ ಎತ್ತರವೆಂದು ಲೆಕ್ಕಹಾಕಬಹುದು. ಸಾಧಾರಣವಾಗಿ ಉಷ್ಣವಲಯದ ಕಾಡುಗಳನ್ನು ವಿವಿಧ ಅಂತಸ್ತಿನ ಕಾಡುಗಳೆಂದು ಪರಿಗಣಿಸುತ್ತಾರೆ. ಮರಗಳ ಕೊಂಬೆ ಮತ್ತು ಎಲೆಗಳ ಸಾಂದ್ರತೆ ವಿವಿಧ ಅಂತಸ್ತಿನಲ್ಲಿರುವುದರಿಂದ ಮೇಲ್ಭಾಗ, ನಡುಭಾಗ ಮತ್ತು ನೆಲಮಟ್ಟದ ಸಸ್ಯವರ್ಗಗಳೆಂದು ಸ್ಥೂಲವಾಗಿ ನಾವು ವಿಭಜಿಸಬಹುದು. ಕೇವಲ ಕೆಲವೇ ಜಾತಿಯ ಮರಗಳಿರುವುದರಿಂದ ಸಮಶೀತೋಷ್ಣವಲಯದ ಕೋನಿಫರಸ್ ಕಾಡುಗಳು ಒಂದೇ ಮಟ್ಟವನ್ನು ಆಕ್ರಮಿಸುತ್ತದೆ. ಆದರೆ ಉಷ್ಣವಲಯದ ಕಾಡುಗಳಲ್ಲಿ ಎಲ್ಲಾ ಮಟ್ಟವನ್ನು ಆಕ್ರಮಿಸಿಕೊಂಡು ಬೆಳೆಯುವ ಸಹಸ್ರಾರು ಬಗೆಯ ಮರಗಳಿರುವುದರಿಂದ ಎಲೆಗಳಿಲ್ಲದ ಖಾಲಿಜಾಗ ಕಾಡಿನೊಳಗೆ ಇರುವುದೇ ಇಲ್ಲ.

**31.** ಭೂಮಂಡಲದ ಮೇಲಿನ ಅತಿ ದೊಡ್ಡ ನಿತ್ಯಹರಿದ್ವರ್ಣದ ಕಾಡು ಇಲ್ಲಿದೆ.

(1) ಅಮೆಜಾನ್ ಜಲಾನಯನ ಪ್ರದೇಶದಲ್ಲಿ
(2) ವಿಯತ್ನಾಂನಲ್ಲಿ
(3) ಭಾರತದಲ್ಲಿ
(4) ಸುಮಾತ್ರದಲ್ಲಿ

**32.** ಭಾರತ ದೇಶದಲ್ಲಿರುವ ಕಾಡುಗಳನ್ನು ಹೀಗೆ ಕರೆಯುತ್ತಾರೆ.

(1) ಹುಲ್ಲುಗಾವಲು
(2) ಕುರುಚಲು ಕಾಡು
(3) ನಿತ್ಯಹರಿದ್ವರ್ಣದ ಕಾಡು
(4) ಮಾನ್‌ಸೂನ್ ಕಾಡು

**33.** 'ಮಳೆಗಾಲ' ಎಂಬ ಪದವು ಈ ಸಂಧಿಗೆ ಉದಾಹರಣೆ

(1) ಆಗಮ ಸಂಧಿ (2) ಆದೇಶ ಸಂಧಿ (3) ವೃದ್ಧಿ ಸಂಧಿ (4) ಲೋಪ ಸಂಧಿ

**34.** ಉಷ್ಣವಲಯದ ಕಾಡುಗಳಲ್ಲಿನ ಮರಗಳ ಸರಾಸರಿ ಎತ್ತರ

(1) ನೂರು ಅಡಿ (2) ಇನ್ನೂರು ಅಡಿ (3) ಮುನ್ನೂರು ಅಡಿ (4) ನಾಲ್ಕು ನೂರು ಅಡಿ

**35.** ಸಾಧಾರಣವಾಗಿ ಉಷ್ಣವಲಯದ ಕಾಡುಗಳನ್ನು ಹೀಗೆ ಪರಿಗಣಿಸುತ್ತಾರೆ.

(1) ವಿವಿಧ ಅಂತಸ್ತಿನ ಕಾಡು
(2) ಬೇಸಿಗೆ ಕಾಡು
(3) ಮಾನ್‌ಸೂನ್ ಕಾಡು
(4) ಮಳೆಕಾಡು

**36.** ಸಮಶೀತೋಷ್ಣವಲಯದ ಕೋನಿಫರಸ್ ಕಾಡುಗಳು ಒಂದೇ ಮಟ್ಟವನ್ನು ಆಕ್ರಮಿಸಲು ಕಾರಣ

(1) ಕೇವಲ ಕೆಲವೇ ಜಾತಿಯ ಮರಗಳಿರುವುದರಿಂದ
(2) ಎಲ್ಲಾ ಬಗೆಯ ಮರಗಳಿರುವುದರಿಂದ
(3) ಸಹಸ್ರಾರು ಬಗೆಯ ಮರಗಳಿರುವುದರಿಂದ
(4) ಯಾವಾಗಲೂ ಮಳೆ ಸುರಿಯುವುದರಿಂದ

**37.** ಈ ಕಾಡುಗಳಲ್ಲಿ ಎಲ್ಲೆಗಳಿಲ್ಲದ ಖಾಲಿಜಾಗ ಕಾಡಿನೊಳಗೆ ಇರುವುದೇ ಇಲ್ಲ

(1) ಸಮಶೀತೋಷ್ಣ ವಲಯದ ಕಾಡುಗಳಲ್ಲಿ
(2) ಉಷ್ಣವಲಯದ ಕಾಡುಗಳಲ್ಲಿ
(3) ಮರಳುಗಾಡಿನಲ್ಲಿ
(4) ಹಿಮಾಲಯದಲ್ಲಿ

**38.** 'ಕಾಡುಗಳನ್ನು' ಈ ಪದದಲ್ಲಿರುವ ವಿಭಕ್ತಿ

(1) ಪ್ರಥಮಾ
(2) ಪಂಚಮೀ
(3) ದ್ವಿತೀಯಾ
(4) ಚತುರ್ಥಿ

**ಸೂಚನೆ :** ಈ ಕೆಳಗೆ ಕೊಟ್ಟಿರುವ ಪದ್ಯವನ್ನು ಓದಿ, ಕೇಳಿರುವ ಪ್ರಶ್ನೆಗಳಿಗೆ ಉತ್ತರಿಸಿರಿ. **(39 – 45)** :

ಮನಸಿನಂಗಳದಲ್ಲಿ ಮತ್ತೆ ಸುಂಟರಗಾಳಿ !
ಧರೆಯ ಅಧರವನದುಮಿ ಮಾವು ಚಿಗಿತವು ಬನದಿ
ಒಂದೊಂದು ಕುಸುಮಕಣ ಕುಣಿಕುಣಿದು ಹೇಳುತಿದೆ
ನಿನ್ನ ಬರವನೆ ಸಾರಿ.

ಮಧುರ ಹೃದಯಗಳೆರಡು ಕೂಡಿದ್ದ ಬಗೆ ನೆನೆದು
ನಭದ ನೀಲಿಯ ರೂಪ ತಾಳಿರುವ ವೇದನೆಯು
ಒರಲುತಿದೆ ಕಿಡಿ ಕಾರಿ.
ಮನಸಿನಂಗಳದಲ್ಲಿ ಮತ್ತೆ ಸುಂಟರಗಾಳಿ !

ಮನೆಯ ಹೂದೋಟದಲಿ ಮೂರು ವರುಷದವರೆಗೆ
ಮಲ್ಲಿಗೆಯ ನಗೆ ಬೀರಿ ಮೆರೆದ ಮಲ್ಲಿಗೆ ಬಳ್ಳಿ
ಒಣಗಿ ಬೇಸಿಗೆ ಧೂಳಿ.

ಆ ಮುತ್ತು , ಅಪ್ಪುಗೆಯು ಇಂದು ಕಣ್ಣಿನ ನೀಲಿ
ಬರಿ ಭ್ರಮೆಯು ಎನ್ನಲೇ ಆಗಿ ಹೋದುದಕೆಲ್ಲ ?
ಊದು ನೆನಪಿನ ಕಾಳಿ.
ಮನಸಿನಂಗಳದಲ್ಲಿ ಮತ್ತೆ ಸುಂಟರಗಾಳಿ !

39. ಮಾವು ಚಿಗಿತವು ಹೀಗೆ ಬನದಿ
(1) ಕುಸುಮಕಣ ಕುಣಿಕುಣಿದು
(2) ಧರೆಯ ಅಧರವನದುಮಿ
(3) ಮಧುರ ಹೃದಯವನದುಮಿ
(4) ಮನಸಿನಂಗಳದಲ್ಲಿ ಕಿಡಿಕಾರಿ

40. 'ಕುಣಿಕುಣಿದು' ಇದು ಈ ವ್ಯಾಕರಣಾಂಶಕ್ಕೆ ಉದಾಹರಣೆ
(1) ಜೋಡುನುಡಿ
(2) ಅನುಕರಣಾವ್ಯಯ
(3) ಪಡೆನುಡಿ
(4) ದ್ವಿರುಕ್ತಿ

www.questionpapersdownload.com

41. ವೇದನೆಯು ಕಿಡಿಕಾರಿ ಒರಲುತಿದೆ ಏಕೆಂದರೆ
(1) ನಭದ ನೀಲಿಯ ರೂಪ ತಾಳಿರುವುದರಿಂದ
(2) ಮಧುರ ಹೃದಯಗಳೆರಡು ಕೂಡಿದ್ದ ಬಗೆ ನೆನೆದು
(3) ಮಧುರ ಹೃದಯದ ದುಃಖವನು ನೆನೆದು
(4) ಸುಂಟರಗಾಳಿಯ ರಭಸಕ್ಕೆ ಸಿಲುಕಿದ್ದರಿಂದ

42. ಮತ್ತೆ ಸುಂಟರಗಾಳಿ ಏಳುತ್ತಿರುವುದು ಇಲ್ಲಿ
(1) ಮನೆಯ ಹೂದೋಟದಲಿ
(2) ಮಧುರ ಹೃದಯದಲಿ
(3) ನಭದ ನೀಲಿಯಲಿ
(4) ಮನಸಿನಂಗಳದಲಿ

43. ಮಲ್ಲಿಗೆ ಬಳ್ಳಿ ಎಷ್ಟು ಕಾಲ ನಗೆ ಬೀರಿ ಮೆರೆದಿತ್ತು .
(1) ಮೂರು ವಾರದವರೆಗೆ
(2) ಮೂರು ವರುಷದವರೆಗೆ
(3) ಮೂರು ತಿಂಗಳವರೆಗೆ
(4) ಮೂರು ವರುಷಗಳಿಗಿಂತ ಕಡಿಮೆ

44. ಆ ಮುತ್ತು , ಅಪ್ಪುಗೆಯು ಇಂದು
(1) ನೆಪವಾಗಿದೆ
(2) ಸುಂಟರಗಾಳಿಯಾಗಿದೆ
(3) ಕಣ್ಣಿನ ನೀಲಿ ಬರಿ ಭ್ರಮೆ
(4) ಕಿಡಿಕಾರಿದೆ

45. 'ಬನ' ಇದರ ಸಮಾನಾರ್ಥಕವಲ್ಲದ ಪದ.
(1) ವಿಪಿನ (2) ಅರಣ್ಯ (3) ವನ (4) ವಿರಿಂಚ

46. ವಿದ್ಯಾರ್ಥಿಯು ಸರಿ ಉತ್ತರ ನೀಡಿದಾಗ ಶಿಕ್ಷಕರು 'ಭೇಷ್ ಚೆನ್ನಾಗಿ ಹೇಳಿದೆ' ಎಂದು ಹೇಳುವುದು
(1) ಧನಾತ್ಮಕ ಅಶಾಬ್ದಿಕ ಅಭಿವರ್ಧನ
(2) ಋಣಾತ್ಮಕ ಶಾಬ್ದಿಕ ಅಭಿವರ್ಧನ
(3) ಧನಾತ್ಮಕ ಶಾಬ್ದಿಕ ಅಭಿವರ್ಧನ
(4) ಋಣಾತ್ಮಕ ಅಶಾಬ್ದಿಕ ಅಭಿವರ್ಧನ

47. ಹೊಸ ವಿಚಾರಗಳನ್ನು ಪೂರ್ವಜ್ಞಾನದೊಂದಿಗೆ ಹೊಂದಿಸುವ, ಪಡೆದ ಹೊಸ ಜ್ಞಾನವನ್ನು ವಿವಿಧ ಸನ್ನಿವೇಶಗಳಿಗೆ ಅನ್ವಯಿಸುವ, ತಿಳಿದುಕೊಂಡ ವಿಚಾರಗಳನ್ನು ಪುನರಾವರ್ತಿಸುವ ಕ್ರಿಯೆಯೇ
(1) ಪ್ರಚೋದನೆ ಬದಲಾವಣೆ ಕೌಶಲ
(2) ಪಾಠ ಪರಿಚಯಿಸುವ ಕೌಶಲ
(3) ವಿವರಣಾ ಕೌಶಲ
(4) ಉಪಸಂಹಾರ ಕೌಶಲ

48. ಅನುಗಮನ ಪದ್ಧತಿಯಲ್ಲಿ ಶಿಕ್ಷಕರು
(1) ಬೋಧನೆಯನ್ನು ಉದಾಹರಣೆಯಿಂದ ಸಾಮಾನ್ಯ ಅಥವಾ ನಿಯಮದ ಕಡೆಗೆ ಸಾಗಿಸುತ್ತಾರೆ
(2) ಸೂತ್ರಗಳನ್ನು ಕಂಠಪಾಠ ಮಾಡಿಸುವರು
(3) ಸಾಮಾನ್ಯ ಸೂತ್ರದ ನಿರೂಪಣೆ ಮಾಡಿ ಅದನ್ನು ಉದಾಹರಣೆಯೊಂದಿಗೆ ಅನ್ವಯಿಸಿ ನೋಡುವರು
(4) ತರಗತಿಯಲ್ಲಿ ನೃತ್ಯ ಮತ್ತು ನಾಟಕಾಭಿನಯಕ್ಕೆ ಮಹತ್ವ ನೀಡುವರು

49. ಒಬ್ಬ ವಿದ್ಯಾರ್ಥಿಯು ಭಾಷೆಯನ್ನು ಸ್ವತಂತ್ರವಾಗಿ ಬಳಸಲು ಇದು ಅಡ್ಡಿಪಡಿಸುವುದಿಲ್ಲ.
(1) ಶಾರೀರಿಕ ನ್ಯೂನತೆ
(2) ಶಾಲೆಯಲ್ಲಿ ಮುಕ್ತ ವಾತಾವರಣದ ಕೊರತೆ
(3) ಶಿಕ್ಷಕರ ಮಾರ್ಗದರ್ಶನದ ಕೊರತೆ
(4) ಪೋಷಕರ ಬಡತನ

50. ಪರಿಹಾರ ಬೋಧನೆಯನ್ನು ಕೈಗೊಳ್ಳಲು ಉಪಯುಕ್ತವಾದ ಪರೀಕ್ಷೆ
(1) ವಾರ್ಷಿಕ ಪರೀಕ್ಷೆ
(2) ದೋಷನಿದಾನ ಪರೀಕ್ಷೆ
(3) ಸಂಕಲನಾತ್ಮಕ ಪರೀಕ್ಷೆ
(4) ರೂಪಣಾತ್ಮಕ ಪರೀಕ್ಷೆ

51. ಪ್ರಚೋದನೆ ಬದಲಾವಣೆಯ ಕೌಶಲದ ಘಟಕಾಂಶಗಳಲ್ಲಿ ಇದು ಬರುವುದಿಲ್ಲ.
(1) ಚಲನೆ
(2) ಧ್ವನಿ ಏರಿಳಿತ
(3) ಪೂರ್ವ ಜ್ಞಾನದ ಬಳಕೆ
(4) ಆಂಗಿಕ ಚೇಷ್ಟೆಗಳು

52. ಸ್ಥೂಲ ಬೋಧನೆಗೆ ಸಂಬಂಧಿಸಿದಂತೆ ಇದು ಅನ್ವಯಿಸುವುದಿಲ್ಲ
(1) ಮರುಬೋಧನೆಗೆ ಅವಕಾಶವಿದೆ
(2) ಬಹುಕೌಶಲಗಳ ಬೋಧನೆ
(3) ನೈಜ ವಿದ್ಯಾರ್ಥಿಗಳನ್ನು ಹೊಂದಿರುತ್ತದೆ
(4) ಜೀವಂತ ಪರಿಸರದಲ್ಲಿ ನಡೆಯುವುದು

53. ಇದು ಪಾತ್ರಾಭಿನಯದ ಮಹತ್ವವಲ್ಲ

(1) ಪರಿಷ್ಕರಣ, ಸಂಪಾದನ ಕೌಶಲವನ್ನು ವೃದ್ಧಿಸುತ್ತದೆ

(2) ಸಂಭಾಷಣ ಕಲೆಯನ್ನು ವೃದ್ಧಿಸುತ್ತದೆ

(3) ಸಮಯ ಸ್ಫೂರ್ತಿಯ ಮಾತುಗಳ ವಿಕಾಸಕ್ಕೆ ಕಾರಣವಾಗುತ್ತದೆ

(4) ವಿದ್ಯಾರ್ಥಿಯನ್ನು ಚಟುವಟಿಕೆಯಲ್ಲಿ ತೊಡಗಿಸುತ್ತದೆ

54. ಇದು ಉತ್ತಮ ಪರೀಕ್ಷೆಯ ಗುಣಲಕ್ಷಣವಲ್ಲ

(1) ಸ್ಪಷ್ಟತೆಯಿಂದ ಕೂಡಿರಬೇಕು

(2) ವಸ್ತುನಿಷ್ಠವಾಗಿರದೆ ವ್ಯಕ್ತಿನಿಷ್ಠವಾಗಿರಬೇಕು

(3) ವಿಶ್ವಾಸನೀಯತೆಯಿಂದ ಕೂಡಿರಬೇಕು

(4) ಸಮಂಜಸತೆಯಿಂದ ಕೂಡಿರಬೇಕು

55. ವಿದ್ಯಾರ್ಥಿಗಳ ಆಲಿಸುವಿಕೆಯಲ್ಲಿನ ದೋಷಗಳನ್ನು ನಿವಾರಿಸುವಲ್ಲಿ ಶಿಕ್ಷಕರ ಈ ಪಾತ್ರ ಪ್ರಮುಖವಾಗಿಲ್ಲ

(1) ವಿದ್ಯಾರ್ಥಿಗಳತ್ತ ವೈಯಕ್ತಿಕ ಗಮನ ಹರಿಸುವುದು ಹಾಗೂ ಪರಿಣಾಮಕಾರಿಯಾಗಿ ಬೋಧಿಸುವುದು

(2) ವಿದ್ಯಾರ್ಥಿಗಳಲ್ಲಿನ ಪೂರ್ವಗ್ರಹಗಳನ್ನು ನಿವಾರಿಸಲು ಪ್ರಯತ್ನಿಸುವುದು

(3) ಲೇಖನ ಸಾಮಗ್ರಿಗಳನ್ನು ಸರಿಯಾಗಿ ಬಳಸುವಂತೆ ತಿಳಿಸುವುದು

(4) ಶಾರೀರಿಕ ಅನಾರೋಗ್ಯದ ಕುರಿತು ವೈದ್ಯರ ತಪಾಸಣೆಗಾಗಿ ಪಾಲಕರಿಗೆ ಸಲಹೆ ಸೂಚನೆ ನೀಡುವುದು

56. 'ನಿತ್ಯ' ಇದರ ತದ್ಭವ ರೂಪ

(1) ಸತ್ಯ (2) ನಿರಂತರ (3) ನಿಚ್ಚ (4) ಪ್ರತಿನಿತ್ಯ

57. 'ಚಾಡಿ ಹೇಳು' ಎಂಬ ಅರ್ಥವನ್ನು ನೀಡುವ ನುಡಿಗಟ್ಟು

(1) ತುಟಿಬಿಚ್ಚು (2) ತಲೆಹಾಕು (3) ಕಿವಿಕೊಡು (4) ಕಿವಿಕಚ್ಚು

58. 'ಮಾಡಿದ ಉಪಕಾರವನ್ನು ಮರೆಯುವವನು' ಎಂಬ ಅರ್ಥ ನೀಡುವ ಪದ

(1) ಕೃತಜ್ಞ (2) ಕೃಪಣ (3) ಕೃತಘ್ನ (4) ಕೃಪಾಳು

59. ಪರಿಮಾಣ ವಾಚಕಕ್ಕೆ ಉದಾಹರಣೆ

(1) ಮೂರು (2) ಅಷ್ಟು (3) ಮೂಡಣ (4) ಕೆಂಪು

60. ಕರ್ಮಧಾರಯ ಸಮಾಸಕ್ಕೆ ಸರಿಯಾದ ಉದಾಹರಣೆ

(1) ಒಕ್ಕಣ್ಣು (2) ಮುಂದಲೆ (3) ಅರಮನೆ (4) ಹೊಸಗನ್ನಡ

## PART – II
## Language – II
## ENGLISH

**Read the given story and answer the questions that follow (Q. No. 31 – 38) :**

Once, a dog named 'Scoofy' lived with his friends in a small town. He ate whatever he wanted to eat and slept in the shade of an oak tree. Though he was enjoying his life in town, he was not satisfied and always hoped to have something better than what he had. One night, when all his friends were sleeping, he woke up at midnight and without saying anything to his friends, he ran away to the city. In the City, he found a house with a place in the backyard where all waste food was dumped. Scoofy ate the delicious left overs every day and turned stout in a few days.

One day, the pet dogs of the house-owner were roaming loose in the backyard. As soon as they detected Scoofy, they attacked him. They dug their sharp teeth into Scoofy's soft and stout flesh. With deep wounds and torn flesh Scoofy returned to his home town.

His old friends greeted him at once and enquired of him. After listening to him, they started laughing mockingly seeing his bad condition. Scoofy was very ashamed and said sorry to his friends.

**31.** Scoofy was not satisfied because he
(1) was fed less
(2) was ill treated by his fellow dogs
(3) hoped to have something better than what he had
(4) wanted to see the world

**32.** Scoofy turned stout in a few days as he
(1) grabbed the other dogs' food
(2) was fed well by the owner
(3) came away from the small town
(4) ate the delicious left overs every day

**33.** Scoofy ran back to his home town because
(1) he remembered his fellow dogs
(2) he couldn't get food in the city
(3) the pet dogs of the house owner wounded him
(4) the owner threw him away

**34.** Scoofy's friends

(1) laughed at him mockingly (2) welcomed him

(3) did not welcome him (4) felt pity for his condition

**35.** At the end, Scoofy said sorry to his friends because

(1) they forced him to ask sorry

(2) he felt ashamed of his fault

(3) it was an usual habit of Scoofy

(4) it gave him pleasure.

**36.** Scoofy ate the delicious left overs everyday.

The adjective in the given sentence is

(1) Scoofy (2) left overs (3) ate (4) delicious

**37.** One word from the passage which means "fat and solid looking especially around the waist" is

(1) dump (2) stout (3) flesh (4) sharp

**38.** The opposite of "satisfied" is

(1) dissatisfied (2) missatisfied

(3) irsatisfied (4) insatisfied

**Read the given poem and answer the questions that follow (Q. No. 39 – 45) :**

It is not growing like a tree
In bulk, doth make Mom better be ;
Or standing long an Oak, three hundred years
To fall a log at last, dry, bald, and sere;
A Lily of a day
Is fairer far in May,
Although it fall and die that night
It was the plant and flower of light !
In small proportions we just beauties see ;
And in short measures life may perfect be.

**39.** According to the poet, life is meaningful when

(1) man is able to contribute to society

(2) we live a hard life with the responsibilities

(3) the quantity of life is more significant than its duration

(4) life is lived with ease

40. The main idea of the given poem is about

(1) the growth of an Oak tree

(2) making man better

(3) the beauty of Lily

(4) short life of beauty and perfection

41. The Oak tree, at the end of its life

(1) falls and dies the same night of its bloom

(2) looks fairer far

(3) is a log, dry, bald and sere

(4) becomes the tree of the light

42. The two objects contrasted in the poem are

(1) a man and an Oak tree

(2) an Oak tree and a lily

(3) a lily and a plant

(4) a tree and a plant

43. The statement which does not relate to the lily in the poem is

(1) it doesn't grow like a tree

(2) it falls and dies the same night of its bloom

(3) it is fairer in May

(4) it stands as long as an Oak

44. The correct rhyming word for 'log' is

(1) hug

(2) bag

(3) fog

(4) dig

45. "And in short measures life may perfect be"

Identify the preposition in the given sentence.

(1) measures

(2) and

(3) may

(4) in

46. Why had you gone there she asked

The correct punctuation for the given sentence is

(1) "why had you gone there she asked"

(2) "why had you gone there ?" she asked.

(3) "why had you gone there !" she asked.

(4) "why had you gone there, she asked".

**47.** The soldiers are the pride of the nation,
The correct question tag to be used in the above sentence is
(1) aren't they ? (2) are they ?
(3) weren't they ? (4) were they ?

**48.** In _______ interesting observation, Ambedkar described _______ methods of civil disobedience as Grammar of Anarchy.
The correct article to be filled in the blanks are
(1) a, an (2) the, the (3) an, the (4) a, the

**49.** Choose the correct response.
(1) Roof – Roof's (2) City – Citys
(3) Photo –Photoes (4) Man – Men

**50.** Find the correct sequence of the sentence.
P. The houses
Q. are built of
R. in the city
S. wood and bricks
(1) P Q R S (2) R Q P S (3) P R Q S (4) P R S Q

**51.** The main aim of the communicative language teaching is to
(1) provide communicative competency to learners
(2) focus on the structure of the target language
(3) emphasize the use of English as a library language
(4) encourage learner to speak like native speakers of English

**52.** Story telling as a strategy in language teaching is aimed at
(1) learning morals
(2) learning to retell the story
(3) engaging learners with language
(4) testing the memory of the learners

**53.** The correct set of communicative activities are
(1) Games, Role-plays, problem solving tasks
(2) Reading, writing, drill work
(3) Games, copy-writing, drill work
(4) Role-plays, copy-writing, games

54. Continuous comprehensive evaluation aims to evaluate
(1) only the knowledge of the child
(2) only the reasoning skills of the child
(3) only to understand the child
(4) overall development of a child

55. The teacher's role is less dominant in a
(1) teacher – centred method
(2) student – centred method
(3) chalk and talk method
(4) lecture method

56. "Students have a conversation". The principle used here is
(1) to spend time conversing with each other
(2) to reflect the given task
(3) to be engaged in an activity
(4) language is for communication

57. The ability to make use of dictionary, atlas, thesaurus, etc. is
(1) Dictionary skill
(2) Reading skill
(3) Writing skill
(4) Reference skill

58. Which one of the following is a low cost teaching aid for teaching English ?
(1) Audio tape
(2) Video tape
(3) Finger puppets
(4) Television

59. In language teaching 'SLA' stands for
(1) Second Language Act
(2) Second Language Activity
(3) Second Language Acquired
(4) Second Language Acquisition

60. Text books are a very useful tool in the hands of a language teacher because
(1) they are easily available and
(2) they are the cheapest TLM
(3) they have content and exercises to engage children in language learning activities
(4) they are very colourful with full of pictures

## KANNADA MEDIUM
## PART – III
## CHILD DEVELOPMENT AND PEDAGOGY

**61.** ಮಾನವ ವಿಕಾಸವನ್ನು ಪ್ರಧಾನವಾಗಿ ವಿಭಜಿಸಲಾಗಿರುವ ಕ್ಷೇತ್ರಗಳು

(1) ಶಾರೀರಿಕ, ಸಂಜ್ಞಾನಾತ್ಮಕ, ಸಾಮಾಜಿಕ ಮತ್ತು ಆಧ್ಯಾತ್ಮಿಕ ವಿಕಾಸ

(2) ಶಾರೀರಿಕ, ಸಂಜ್ಞಾನಾತ್ಮಕ, ಸಾಮಾಜಿಕ ಮತ್ತು ಸಂವೇಗಾತ್ಮಕ ವಿಕಾಸ

(3) ಶಾರೀರಿಕ, ಸಂಜ್ಞಾನಾತ್ಮಕ, ಸಾಮಾಜಿಕ ಮತ್ತು ಸೌಂದರ್ಯಾತ್ಮಕ ವಿಕಾಸ

(4) ಶಾರೀರಿಕ, ಸಂಜ್ಞಾನಾತ್ಮಕ, ಸಾಮಾಜಿಕ ಮತ್ತು ಮಾನಸಿಕ ವಿಕಾಸ

**62.** ಶಿರ-ಪಾದಾಭಿಮುಖ ನಿಯಮದ ಪ್ರಕಾರ ಸ್ನಾಯು ಸಾಮರ್ಥ್ಯದ ವಿಕಾಸವು ಮುಂದುವರೆಯುವುದು

(1) ಕೇಂದ್ರದಿಂದ ಪರಿಧಿಯೆಡೆಗೆ (2) ಶಿರದಿಂದ ಪಾದದೆಡೆಗೆ

(3) ಪರಿಧಿಯಿಂದ ಕೇಂದ್ರದೆಡೆಗೆ (4) ಪಾದದಿಂದ ಶಿರದೆಡೆಗೆ

**63.** ಈ ಕೆಳಗಿನವುಗಳಲ್ಲಿ ಯಾವುದು ಅನುವಂಶೀಯತೆಯ ನಿಯಮವಲ್ಲ ?

(1) ವಿಕಾಸದ ನಿಯಮ (2) ಸಾಮ್ಯತೆಯ ನಿಯಮ

(3) ಪರಿವರ್ತನೆಯ ನಿಯಮ (4) ಹಿಂಚಲನೆಯ ನಿಯಮ

**64.** ತನ್ನ ಸಮವಯಸ್ಕರ ಸಮೂಹದಲ್ಲಿ ಮಗುವು ಸಕ್ರಿಯ ಸದಸ್ಯನಾಗುವ ಅವಧಿ

(1) ಪೂರ್ವ ಬಾಲ್ಯಾವಧಿ (2) ಬಾಲ್ಯಾವಧಿ

(3) ತಾರುಣ್ಯಾವಧಿ (4) ವಯಸ್ಕಾವಧಿ

**65.** ಪಿಯಾಜೆರವರ ಪ್ರಕಾರ ಮಗುವು ವಸ್ತು ಪರಿಗ್ರಹಣ ಬಿಂಬಿಸುವ ಹಂತ

(1) ಸಂವೇದ ಚಾಲನಾ ಹಂತ

(2) ಪೂರ್ವ ಕಾರ್ಯಾಚರಣೆ ಹಂತ

(3) ಔಪಚಾರಿಕ ಕಾರ್ಯಾಚರಣೆ ಹಂತ

(4) ಮೂರ್ತ ಕಾರ್ಯಾಚರಣೆ ಹಂತ

**66.** ಒಬ್ಬ ಬಾಲಕನ ಮಾನಸಿಕ ವಯಸ್ಸು ಏಳು ವರ್ಷ ಮತ್ತು ಶಾರೀರಿಕ ವಯಸ್ಸು ಐದು ವರ್ಷ. ಹಾಗಾದರೆ, ಆತನ ಬುದ್ಧಿಶಕ್ತಿಯ ಸೂಚ್ಯಾಂಕ

(1) 100 (2) 140 (3) 80 (4) 120

67. ತನ್ನ ಪರಿಸರದ ಬಗೆಗೆ ಜಾಗೃತಿಯನ್ನು ಹೊಂದಿರುವ ವ್ಯಕ್ತಿಯ ಸ್ವಭಾವ

(1) ಅಂತರ್-ವ್ಯಕ್ತೀಯ
(2) ಅಂತರ್-ವೈಯಕ್ತಿಕ
(3) ದೃಶ್ಯ-ಪ್ರಾದೇಶಿಕ
(4) ದೈಹಿಕ-ಸ್ನಾಯು

68. ಭಾಷಾ ವಿಕಾಸದೊಂದಿಗೆ ಸಹಭಾಗಿತ್ವವನ್ನು ಹೊಂದಿದ ಮನೋವಿಜ್ಞಾನಿ

(1) ನೋಮ್ ಕಾಮ್‌ಸ್ಕಿ
(2) ವಿಲಿಯಂ ಜೇಮ್ಸ್
(3) ಕಾರ್ಲ್ ರೋಜರ್ಸ್
(4) ಎರಿಕ್ ಎರಿಕ್‌ಸನ್

69. ಉಭಯ ಲಿಂಗಿತ್ವ ಪರಿಕಲ್ಪನೆಯಲ್ಲಿ ಸಮಕ್ಷಿಮಸಬಹುದಾದ ಗುಣ

(1) ಗಂಡುತನದ ಗುಣಗಳಿರುವುದು
(2) ಹೆಣ್ಣುತನದ ಗುಣಗಳಿರುವುದು
(3) ಗಂಡುತನ ಮತ್ತು ಹೆಣ್ಣುತನದ ಎರಡೂ ಗುಣಗಳಿರುವುದು
(4) ಗಂಡುತನ ಮತ್ತು ಹೆಣ್ಣುತನದ ಎರಡೂ ಗುಣಗಳಿಲ್ಲದಿರುವುದು

70. ಅಂತರ್‌ಶಾಲಾ ಚರ್ಚಾ ಸ್ಪರ್ಧೆಗಾಗಿ ವಿದ್ಯಾರ್ಥಿಗಳನ್ನು ತರಬೇತುಗೊಳಿಸುವಾಗ ಒಂದು ನಿರ್ದಿಷ್ಟ ಶಾಲೆಯು ಬಾಲಕಿಯರಿಗೆ ಪ್ರಾಮುಖ್ಯತೆಯನ್ನು ನೀಡುತ್ತದೆ. ಇದು ಪ್ರತಿಬಿಂಬಿಸುವುದು

(1) ಲಿಂಗ ಸಮಾನತೆ
(2) ಲಿಂಗ ಗುರುತಿಸುವಿಕೆ
(3) ಲಿಂಗ ಪಕ್ಷಪಾತ
(4) ಲಿಂಗ ಸಂವೇದನೆ

71. ಕೆಲವರು ಸಿಡುಕು ಸ್ವಭಾವದವರಾಗಿರುತ್ತಾರೆ, ಇನ್ನೂ ಕೆಲವರು ಸ್ವಾಭಾವಿಕವಾಗಿ ಶಾಂತಯುತರಾಗಿರುತ್ತಾರೆ. ಇಲ್ಲಿ ಗಮನಿಸಬಹುದಾದ ಬೇಧ

(1) ಸಾಮಾಜಿಕ
(2) ಬೌದ್ಧಿಕ
(3) ವ್ಯಕ್ತಿತ್ವ
(4) ಸಂವೇಗಾತ್ಮಕ

72. ಲಿಂಗ ತಾರತಮ್ಯದ ವಿರುದ್ಧದ ಪರಿಭಾಷೆ

(1) ಲಿಂಗ ಪಕ್ಷಪಾತ
(2) ಲಿಂಗ ಅಸಮಾನತೆ
(3) ಲಿಂಗ ಸಮಾನತೆ
(4) ಲಿಂಗ ಅಂಧತ್ವ

73. ಪ್ರಬಂಧ ಮಾದರಿ ಪ್ರಶ್ನೆಗಳ ಅನುಕೂಲತೆಗಳು

(1) ಅಂಕ ಗಳಿಸಲು ಸುಲಭ

(2) ವಿದ್ಯಾರ್ಥಿಗಳು ಉತ್ತರವನ್ನು ಊಹಿಸಬಹುದು

(3) ಕಲಿಕಾ ಅಡೆತಡೆಗಳನ್ನು ಶಿಕ್ಷಕರು ನಿರ್ಣಯಿಸಬಹುದು

(4) ಕ್ಲಿಷ್ಟ ಕಲಿಕೆಯ ಫಲವನ್ನು ಮಾಪನ ಮಾಡಬಹುದು

74. ಒಂದು ಶಾಲೆಯ ವಿದ್ಯಾರ್ಥಿಗಳಲ್ಲಿನ ಕಲಿಕೆಯನ್ನು ಮಾಪಿಸಲು ಬಳಸುವ ಸೂಕ್ತ ಸಾಧನ

(1) ತರಗತಿ ಚರ್ಚೆ

(2) ಮಧ್ಯಂತರ ಪರೀಕ್ಷೆ

(3) ಪೋರ್ಟ್‌ಫೋಲಿಯೋ

(4) ಘಟಕ ಪರೀಕ್ಷೆ

75. ವಿದ್ಯಾರ್ಥಿಗಳು ತಮ್ಮ ಕಾರ್ಯಕ್ಷಮತೆಯನ್ನು ಪ್ರತಿಬಿಂಬಿಸುವ ಮೌಲ್ಯಮಾಪನದ ವಿಧ

(1) ರಸಪ್ರಶ್ನೆ

(2) ಸ್ವಯಂ ಮೌಲ್ಯಮಾಪನ

(3) ಸಮ ವಯಸ್ಕರ ಮೌಲ್ಯಮಾಪನ

(4) ಘಟಕ ಪರೀಕ್ಷೆ

76. ವಿಶ್ವಸನೀಯತೆಯನ್ನು ಗುರುತಿಸಲು ಕಷ್ಟವಾಗುವ ಪ್ರಶ್ನಾವಿಧ

(1) ಬಹುಆಯ್ಕೆ ಪ್ರಶ್ನೆಗಳು

(2) ಅನಿರ್ದೇಶಿತ ಪ್ರಬಂಧ

(3) ಲಘು ಉತ್ತರ

(4) ರಚನಾತ್ಮಕ ಪ್ರಬಂಧ

77. ಕಾರ್ಯಕ್ಷಮತೆ ಆಧಾರಿತ ಮೌಲ್ಯಮಾಪನದ ಪ್ರಮುಖ ಲಕ್ಷಣ

(1) ಇದನ್ನು ಪರಿಣಾಮಕಾರಿಯಾಗಿ ಪೇಪರ್-ಪೆನ್ಸಿಲ್ ಪರೀಕ್ಷೆಯ ಮೂಲಕ ಮೌಲ್ಯೀಕರಿಸಬಹುದು

(2) ಇದನ್ನು ಉನ್ನತ ಮಟ್ಟದ ತರಗತಿಗಳಲ್ಲಿ ಕಾರ್ಯಗತಗೊಳಿಸಬಹುದು

(3) ಇದು ಪ್ರಕ್ರಿಯೆ ಮತ್ತು ಉತ್ಪನ್ನದ ಬಗ್ಗೆ ಸುಳಿವು ಒದಗಿಸುತ್ತದೆ

(4) ಇದನ್ನು ವಿದ್ಯಾರ್ಥಿಗಳು ತಮ್ಮ ಕೌಶಲ ಮತ್ತು ಸಾಮರ್ಥ್ಯದ ಪ್ರದರ್ಶನಕ್ಕೆ ಬಳಸಲಾಗುತ್ತದೆ

78. ಶಿಕ್ಷಕರು ಹೂವಿನ ರಚನೆ ಮತ್ತು ಕಾರ್ಯನಿರ್ವಹಣೆಯನ್ನು ಅನುಕೂಲಿಸಲು ದಾಸವಾಳ ಹೂವನ್ನು ಬಳಸುತ್ತಾರೆ. ಇಲ್ಲಿ ಅಡಕವಾದ ಬೋಧನಾ ಅನುಕೂಲತೆಯು

(1) ದೃಶ್ಯ ವಸ್ತು ಬೋಧನೆ

(2) ಸ್ಪರ್ಶ ವಸ್ತು ಬೋಧನೆ

(3) ಪ್ರಾತ್ಯಕ್ಷಿಕ ಬೋಧನೆ

(4) ಎರಡು ಆಯಾಮದ ವಸ್ತು ಬೋಧನೆ

79. ತರಗತಿಯಲ್ಲಿ ಪ್ರಚಲಿತವಿರುವ ಸಂವೇದನಾ ನ್ಯೂನತೆಯ ವಿಧ
(1) ಸಂಜ್ಞಾನಾತ್ಮಕ ನ್ಯೂನತೆ
(2) ಮೂಳೆಗಳ ನ್ಯೂನತೆ
(3) ಕಲಿಕಾ ನ್ಯೂನತೆ
(4) ದೃಶ್ಯ ನ್ಯೂನತೆ

80. ಮನೆ ಆಧಾರಿತ ಶಿಕ್ಷಣದ ಅಗತ್ಯವಿರುವ ಮಕ್ಕಳ ವಿಧ
(1) ಬೌದ್ಧಿಕ ದುರ್ಬಲತೆ
(2) ಕಲಿಕಾ ದುರ್ಬಲತೆ
(3) ಸಂಚಲನ ದುರ್ಬಲತೆ
(4) ಬಹು ದುರ್ಬಲತೆ

81. ಹೆಚ್ಚುವರಿ ಬೆಂಬಲಕ್ಕಾಗಿ ಮಗುವನ್ನು ಸಂಪನ್ಮೂಲ ಕೋಣೆಯಲ್ಲಿ ಇರಿಸಲಾಗುತ್ತದೆ. ಈ ರೀತಿ ಅನುಕೂಲೀಕರಿಸುವ ಅವಶ್ಯಕತೆ
(1) ಮುಖ್ಯವಾಹಿ ಶಿಕ್ಷಣ
(2) ವಿಶೇಷ ಶಿಕ್ಷಣ
(3) ಸಮಗ್ರ ಶಿಕ್ಷಣ
(4) ಅಂತರ್ಗತ ಶಿಕ್ಷಣ

82. ದುರ್ಬಲತೆ ಹೊಂದಿದ ವ್ಯಕ್ತಿಗಳ ಹಕ್ಕು ಕಾಯಿದೆ (RPWD Act) ಜಾರಿಗೊಂಡ ವರ್ಷ
(1) 2014 (2) 2016 (3) 2018 (4) 2020

83. ಬ್ಲೂಂನ ಶೈಕ್ಷಣಿಕ ವಲಯಗಳ ಪ್ರಕಾರ ಉನ್ನತ ಕ್ರಮಾಂಕದ ಚಿಂತನಾ ಕೌಶಲಗಳನ್ನು ಪರಿಗಣಿಸುವುದು
(1) ಸ್ಮರಿಸು, ಗ್ರಹಿಸು ಮತ್ತು ಅನ್ವಯಿಸು
(2) ವಿಶ್ಲೇಷಿಸು, ಸಂಶ್ಲೇಷಿಸು ಮತ್ತು ಮೌಲ್ಯೀಕರಿಸು
(3) ಗ್ರಹಿಸು, ಅನ್ವಯಿಸು ಮತ್ತು ಮೌಲ್ಯೀಕರಿಸು
(4) ಅನ್ವಯಿಸು, ವಿಶ್ಲೇಷಿಸು ಮತ್ತು ಸಂಶ್ಲೇಷಿಸು

84. ಪಿಯಾಜೆರವರ ಸಿದ್ಧಾಂತದ ಪ್ರಕಾರ, ಜ್ಞಾನಾತ್ಮಕ ಬೆಳವಣಿಗೆಯ ಪ್ರಕ್ರಿಯೆಯಲ್ಲಿ ಹೊಂದಾಣಿಕೆ ಮಾಡಬಹುದಾದ ಎರಡು ಮೂಲಭೂತ ಅಂಶಗಳು
(1) ಮಾಹಿತಿ ಮತ್ತು ಸೂಚನೆ
(2) ಜ್ಞಾನ ಮತ್ತು ತಿಳುವಳಿಕೆ
(3) ಅಭ್ಯಾಸ ಮತ್ತು ಆಚರಣೆ
(4) ಸಮೀಕರಿಸುವಿಕೆ ಮತ್ತು ಅನುವು ಮಾಡಿಕೊಡುವಿಕೆ

85. ಹೇಳಿಕೆ A : ಆಲೋಚನಾ ಕ್ರಮದಲ್ಲಿ ಗಂಭೀರ ಸಮಸ್ಯೆಗಳಿವೆ ಎಂಬುದನ್ನು ಒಬ್ಬರು ಒಪ್ಪಿಕೊಂಡಾಗ ವಿಮರ್ಶಾತ್ಮಕ ಚಿಂತನಾ ಬೆಳವಣಿಗೆ ನಡೆಯುತ್ತದೆ.

ಹೇಳಿಕೆ B : ವಿಮರ್ಶಾತ್ಮಕ ಚಿಂತನಾ ಬೆಳವಣಿಗೆಯು ಒಬ್ಬರು ನಿಯಮಿತ ಅಭ್ಯಾಸದಲ್ಲಿ ತೊಡಗಿಸಿಕೊಂಡಾಗ ನಡೆಯುತ್ತದೆ.

(1) ಹೇಳಿಕೆ Aಯು ಹೇಳಿಕೆ Bಯನ್ನು ಬೆಂಬಲಿಸುತ್ತದೆ
(2) ಹೇಳಿಕೆ Bಯು ಹೇಳಿಕೆ Aಯನ್ನು ಬೆಂಬಲಿಸುತ್ತದೆ
(3) ಎರಡೂ ಹೇಳಿಕೆಗಳು ಸರಿಯಾಗಿದೆ
(4) ಎರಡೂ ಹೇಳಿಕೆಗಳು ತಪ್ಪಾಗಿದೆ

86. ನಿರ್ಧಾರವನ್ನು ತೆಗೆದುಕೊಳ್ಳುವಲ್ಲಿ ಪ್ರಭಾವಿಸುವ ಹ್ಯುರಿಸ್ಟಿಕ್ ಕ್ರಮದ ಘಟಕಾಂಶಗಳು
(1) ಲಭ್ಯತೆ, ಪ್ರಾತಿನಿಧ್ಯತೆ, ಆಧಾರ ಮತ್ತು ಹೊಂದಾಣಿಕೆ.
(2) ಲಭ್ಯತೆ, ನಿಗದಿತ ಚೌಕಟ್ಟು, ಏರಿಕೆ ಮತ್ತು ಹೊಂದಾಣಿಕೆ
(3) ಲಭ್ಯತೆ, ಹೋಲಿಕೆ, ಮೌಲ್ಯೀಕರಣ ಮತ್ತು ಹೊಂದಾಣಿಕೆ
(4) ಲಭ್ಯತೆ, ವಿನ್ಯಾಸ, ನಿಗದಿತ ಚೌಕಟ್ಟು ಮತ್ತು ಹೊಂದಾಣಿಕೆ

87. ಸಂಜ್ಞಾನ ಅಂಶದ ಅಡಿಯಲ್ಲಿ ಬರದಿರುವ ಪ್ರಕ್ರಿಯೆ
(1) ಪ್ರತ್ಯಕ್ಷಾನುಭವ
(2) ಪರಿಕಲ್ಪನೆಯನ್ನು ರೂಪಿಸುವುದು
(3) ಹೊಂದಾಣಿಕೆ
(4) ಸಮಸ್ಯಾ ಪರಿಹಾರ ಸಾಮರ್ಥ್ಯ

88. ಮ್ಯಾಕ್‌ಡೋಗಲ್‌ರವರ ಪ್ರಕಾರ, ಸಹಜ ಪ್ರವೃತ್ತಿಯಾದ ಸ್ವ-ಪ್ರತಿಷ್ಠೆಯ ಸಹಚರ್ಯ ಸಂವೇಗವನ್ನು ಹೊಂದಿರುವುದು
(1) ಸಕಾರಾತ್ಮಕ ಸ್ವ-ಭಾವನೆ
(2) ನಕಾರಾತ್ಮಕ ಸ್ವ-ಭಾವನೆ
(3) ಸೌಂದರ್ಯದ ಭಾವನೆ
(4) ಸೃಜನಾತ್ಮಕ ಭಾವನೆ

89. ಈ ಕೆಳಗಿನ ಅಂಶಗಳಲ್ಲಿ ದೈಹಿಕ ಅಗತ್ಯ ಹೊಂದಿರುವ ಅಂಶ
(1) ಸ್ವ-ಪ್ರತಿಷ್ಠೆಯ ಅಗತ್ಯ
(2) ಭದ್ರತೆಯ ಅಗತ್ಯ
(3) ಪ್ರೀತಿ ಮತ್ತು ವಾತ್ಸಲ್ಯದ ಅಗತ್ಯ
(4) ಬಳಲಿಕೆಯಾದಾಗ ವಿಶ್ರಾಂತಿಯ ಅಗತ್ಯ

90. ಸಂಜ್ಞಾನಾತ್ಮಕ ವಲಯದಲ್ಲಿ ಕಂಡುಬರುವ ಕಲಿಕಾ ಚಟುವಟಿಕೆ
(1) ಆಕಾರ ಕೊಡುವುದು
(2) ಕೂಡಿಸುವುದು
(3) ಊಹಿಸುವುದು
(4) ನರ್ತಿಸುವುದು

## KANNADA MEDIUM
## PART – IV
## MATHEMATICS

91. ಕೆಳಗಿನವುಗಳಲ್ಲಿ ಅಭಾಗಲಬ್ಧ ಸಂಖ್ಯೆಯು

(1) $\frac{3}{7}$ (2) 0 (3) $\sqrt{3}$ (4) 5.333.....

92. ರೇಖಾತ್ಮಕ ಸಮೀಕರಣ $6(m - 5) = 20$ ದಲ್ಲಿ 'm' ನ ಬೆಲೆ

(1) $\frac{25}{6}$ (2) $\frac{-25}{6}$ (3) $\frac{25}{3}$ (4) $\frac{-25}{3}$

93. ತ್ರಿಜ್ಯ 7 ಮಾನಗಳು ಇರುವ ಒಂದು ಅರ್ಧ ವೃತ್ತ ಖಂಡದ ಸುತ್ತಳತೆಯು


$\left(\pi = \frac{22}{7}\right.$ ಎಂದು ಪರಿಗಣಿಸಿರಿ$\left.\right)$

(1) 44 ಮಾನಗಳು (2) 22 ಮಾನಗಳು (3) 36 ಮಾನಗಳು (4) 66 ಮಾನಗಳು

94. 10, 12, 18, 14, x + 1 ದತ್ತಾಂಶಗಳ ಸರಾಸರಿಯು 12 ಆದರೆ, 'x' ನ ಬೆಲೆಯು

(1) 10 (2) 12 (3) 6 (4) 5

95. ಕೊಟ್ಟಿರುವ ಚಿತ್ರದಲ್ಲಿ AB||DE ಮತ್ತು BC||EF. $\angle DEF = 80°$ ಆದರೆ, $\angle ABC$ ಯ ಅಳತೆಯು




(1) 80° (2) 100° (3) 180° (4) 160°

SPACE FOR ROUGH WORK

96. ಈ ಕೆಳಗಿನವುಗಳಲ್ಲಿ ತಪ್ಪಾದ ಹೇಳಿಕೆ

(1) ಪ್ರತಿಯೊಂದು ಸಂಖ್ಯೆಯು ಅದರ ಅಪವರ್ತನವೇ ಆಗಿದೆ

(2) ದತ್ತ ಸಂಖ್ಯೆಯ ಅಪವರ್ತನಗಳ ಸಂಖ್ಯೆಯು ಅಪರಿಮಿತ

(3) ದತ್ತ ಸಂಖ್ಯೆಯ ಪ್ರತಿಯೊಂದು ಅಪವರ್ತನವು ಆ ಸಂಖ್ಯೆಗಿಂತ ಚಿಕ್ಕದು ಅಥವಾ ಅದಕ್ಕೆ ಸಮ

(4) ಪ್ರತಿಯೊಂದು ಸಂಖ್ಯೆಯು ಅದೇ ಸಂಖ್ಯೆಯ ಗುಣಕವಾಗಿರುತ್ತದೆ

97. ಆದಿತ್ಯನ ತಾಯಿಯ ಈಗಿನ ವಯಸ್ಸು ಆದಿತ್ಯನ ಈಗಿನ ವಯಸ್ಸಿನ ಮೂರರಷ್ಟಿದೆ. 6 ವರ್ಷಗಳ ನಂತರ ಅವರಿಬ್ಬರ ವಯಸ್ಸಿನ ಮೊತ್ತ 76 ವರ್ಷಗಳಾಗುತ್ತದೆ, ಹಾಗಾದರೆ ಆದಿತ್ಯನ ಈಗಿನ ವಯಸ್ಸು

(1) 14 ವರ್ಷಗಳು (2) 16 ವರ್ಷಗಳು (3) 15 ವರ್ಷಗಳು (4) 18 ವರ್ಷಗಳು


98. ಸುತ್ತಳತೆ 18 cm ಮತ್ತು ಸಮವಲ್ಲದ ಬಾಹು 8 cm ಇರುವ ಸಮದ್ವಿಬಾಹು ತ್ರಿಭುಜದ ವಿಸ್ತೀರ್ಣವು

(1) 12 $cm^2$ (2) 72 $cm^2$ (3) 60 $cm^2$ (4) 144 $cm^2$

99. 8% ರಿಯಾಯಿತಿ ಕೊಟ್ಟ ನಂತರ ಒಂದು ವಸ್ತುವಿನ ಮಾರಿದ ಬೆಲೆಯು ₹ 276 ಆದರೆ, ಅದರ ಕೊಂಡ ಬೆಲೆಯು

(1) ₹ 324 (2) ₹ 300 (3) ₹ 350 (4) ₹ 252

100. $\Delta ABC$ ಯಲ್ಲಿ, AB = AC ಮತ್ತು $\angle BAC = 80°$. $AB || CE$ ಆದರೆ, $\angle ECD$ ಯ ಅಳತೆಯು




(1) 80° (2) 50° (3) 130° (4) 160°

SPACE FOR ROUGH WORK

101. 585 ವಿದ್ಯಾರ್ಥಿಗಳಿರುವ ಒಂದು ಶಾಲೆಯಲ್ಲಿ 26 ಶಿಕ್ಷಕರಿದ್ದಾರೆ. ಆ ಶಾಲೆಯ ಶಿಕ್ಷಕರ ಮತ್ತು ವಿದ್ಯಾರ್ಥಿಗಳ ಸಂಖ್ಯೆಗಳ ಅನುಪಾತ

(1) 1 : 45 (2) 2 : 55 (3) 2 : 45 (4) 1 : 40

102. $(1.03)^2 - (0.97)^2$ ಇದರ ಬೆಲೆ

(1) 0.12 (2) 0.012 (3) 1.2 (4) 1.4

103. ಕರ್ಣವು $12\sqrt{2}$ cm ಆಗಿರುವ ಒಂದು ವರ್ಗದ ವಿಸ್ತೀರ್ಣವು

(1) 288 $cm^2$ (2) 144 $cm^2$ (3) 48 $cm^2$ (4) 56 $cm^2$

104. ₹ 2,000 ಅಸಲು 20% ದರದಲ್ಲಿ ₹ 4,000 ಮೊತ್ತ ಆಗಲು ತೆಗೆದುಕೊಳ್ಳುವ ಕಾಲ (ವರ್ಷಗಳಲ್ಲಿ)

(1) 5 ವರ್ಷಗಳು (2) 10 ವರ್ಷಗಳು (3) 15 ವರ್ಷಗಳು (4) 20 ವರ್ಷಗಳು

105. $\Delta ABC \sim \Delta DEF$ ಮತ್ತು ಅವುಗಳ ವಿಸ್ತೀರ್ಣಗಳು ಕ್ರಮವಾಗಿ 49 $cm^2$ ಮತ್ತು 81 $cm^2$. EF = 6.3 cm ಆದರೆ, BC ಯ ಉದ್ದ

(1) 7 cm (2) 9 cm (3) 4.9 cm (4) 8.1 cm

106. ಒಂದು ನಕಾಶೆಯಲ್ಲಿ ಎರಡು ನಗರಗಳು 4 cm ದೂರದಲ್ಲಿವೆ. ವಾಸ್ತವವಾಗಿ ಆ ಎರಡು ನಗರಗಳ ನಡುವಿನ ದೂರ 1200 km ಗಳಾದರೆ, ಆ ನಕಾಶೆಯ ದೂರ ಪ್ರಮಾಣ ಸೂಚಕ

(1) 1 : 30000000 (2) 1 : 3000000

(3) 1 : 20000000 (4) 1 : 300000

107. 6xy – 4y + 6 – 9x ಬೀಜೋಕ್ತಿಯ ಒಂದು ಅಪವರ್ತನವು (3x – 2) ಆದರೆ, ಅದರ ಇನ್ನೊಂದು ಅಪವರ್ತನವು

(1) (2y + 3) (2) (3y + 2) (3) (2y – 3) (4) (3y – 2)

108. A(4, – 3) ಮತ್ತು B(– 2, 3) ಬಿಂದುಗಳ ನಡುವಿನ ದೂರ

(1) $5\sqrt{2}$ ಮಾನಗಳು (2) $6\sqrt{2}$ ಮಾನಗಳು


(3) $7\sqrt{2}$ ಮಾನಗಳು (4) $4\sqrt{2}$ ಮಾನಗಳು

**SPACE FOR ROUGH WORK**

**109.** $\frac{2^2 \times 32}{(2^3)^3}$ ಇದರ ಬೆಲೆಯು

(1) 4 (2) $2^{16}$ (3) $\frac{1}{4}$ (4) 2

**110.** ಕೊಟ್ಟಿರುವ ಚಿತ್ರದಲ್ಲಿ 'O' ವೃತ್ತದ ಕೇಂದ್ರ . $\angle POQ = 110°$ ಆದರೆ, $\angle PCQ$ ನ ಅಳತೆಯು




(1) 90° (2) 110° (3) 80° (4) 55°

**111.** 675 ನ್ನು ಒಂದು ಪೂರ್ಣ ಘನವನ್ನಾಗಿಸಲು ಅದನ್ನು ಗುಣಿಸಬೇಕಾದ ಕನಿಷ್ಠ ಸ್ವಾಭಾವಿಕ ಸಂಖ್ಯೆ

(1) 3 (2) 7 (3) 2 (4) 5

**112.** ವರ್ಗ ಸಮೀಕರಣ $ax^2 + bx + c = 0$ ಇಲ್ಲಿ $a \neq 0$, ಇದರ ಶೋಧಕವು

(1) $b^2 + 4ac$ (2) $b^2 - 4ac$ (3) $b^2 - 2ac$ (4) $b^2 + 2ac$

**113.** ಅಭಿಮುಖ ಬಾಹುಗಳು ಸಮವಿರುವ ಆದರೆ ಕರ್ಣಗಳು ಸಮವಲ್ಲದ ಚತುರ್ಭುಜ

(1) ಆಯತ (2) ವರ್ಗ (3) ಪತಂಗ (4) ಸಮಾಂತರ ಚತುರ್ಭುಜ

**114.** $\sqrt[3]{a^5} \times a^x = 1$ ಆದರೆ, 'x' ನ ಬೆಲೆಯು

(1) $\frac{-3}{5}$ (2) $\frac{-5}{3}$ (3) $-15$ (4) 8

---

**SPACE FOR ROUGH WORK**

**115.** 7 cm ಎತ್ತರವಿರುವ ನೇರ ಪಾದ ಸಿಲಿಂಡರ್‌ನ ಪಾರ್ಶ್ವ ಮೇಲ್ಮೈ ವಿಸ್ತೀರ್ಣ 220 $cm^2$. ಈ ಸಿಲಿಂಡರ್‌ನ ಪಾದದ ವ್ಯಾಸವು ( $\pi = \frac{22}{7}$ ಎಂದು ಪರಿಗಣಿಸಿರಿ )

(1) 10 cm (2) 5 cm (3) 14 cm (4) 7 cm

**116.** $\frac{2}{3}, \frac{3}{7}$ ಮತ್ತು $\frac{1}{3}$ ಗಳ ಮೊತ್ತ

(1) $\frac{10}{7}$ (2) $\frac{6}{13}$ (3) $\frac{20}{7}$ (4) $\frac{20}{21}$

**117.** ಈ ಕೆಳಗಿನವುಗಳಲ್ಲಿ x-ಅಕ್ಷದ ಮೇಲಿನ ಬಿಂದುವು

(1) (1, 6) (2) (– 3, 2) (3) (0, 5) (4) (3, 0)

**118.** ಮನೋವಿಜ್ಞಾನಿಗಳ ಪ್ರಕಾರ ಮಕ್ಕಳ ಯೋಚನಾ ಪ್ರಕ್ರಿಯೆಯ ಪ್ರಾಥಮಿಕ ಹಂತದ ಗಣಿತ ಕಲಿಕೆಗೆ ಸಂಬಂಧಿಸಿದುದು

(1) ಆಲಿಸುವಿಕೆ ಮತ್ತು ಬರವಣಿಗೆ
(2) ವರ್ತನೆ ಮತ್ತು ಆಜ್ಞಾನುಕರಣೆ
(3) ಸಾಮರ್ಥ್ಯ ಮತ್ತು ಗ್ರಹಿಕೆ
(4) ಗ್ರಹಿಕೆ ಮತ್ತು ಪ್ರಾತಿನಿಧ್ಯತೆ

**119.** ದತ್ತ ಸಮಸಂಖ್ಯೆಗಳಾದ 2, 4, 6, 8, 10 ಮತ್ತು 16 ರಲ್ಲಿ ಯಾವುದೇ ಎರಡು ಸಮ ಸಂಖ್ಯೆಗಳನ್ನು ಸಂಕಲಿಸಿದಾಗ, ಅಂದರೆ 2 + 4 = 6 ಸಮಸಂಖ್ಯೆಯಾಗುತ್ತದೆ. 6 + 4 = 10 ಸಮಸಂಖ್ಯೆಯಾಗುತ್ತದೆ. ಅದೇ ರೀತಿ 8 + 16 = 24 ಸಹಾ ಸಮಸಂಖ್ಯೆಯಾಗುತ್ತದೆ.

ವಿದ್ಯಾರ್ಥಿಯು ಈ ಸಾಂಖ್ಯಿಕ ಅಂಶವನ್ನು ಅಭ್ಯಸಿಸಿ ಕ್ರೋಢೀಕರಿಸಿದಾಗ ''ಎರಡು ಸಮಸಂಖ್ಯೆಗಳನ್ನು ಸಂಕಲಿಸಿದಾಗ ಬರುವ ಮೊತ್ತ ಯಾವಾಗಲೂ ಸಮಸಂಖ್ಯೆಯಾಗಿರುತ್ತದೆ.'' ಎಂಬ ತೀರ್ಮಾನಕ್ಕೆ ಬರುತ್ತಾನೆ.

ಈ ಪ್ರಕ್ರಿಯೆಯ ಹಿಂದಿರುವ ಗಣಿತೀಯ ತರ್ಕ

(1) ಸಂಶ್ಲೇಷಣಾ ತರ್ಕ (2) ಅನುಗಮನ ತರ್ಕ (3) ವಿಶ್ಲೇಷಣಾ ತರ್ಕ (4) ನಿಗಮನ ತರ್ಕ

**120.** ಬೋಧನಾ ಸಂದರ್ಭದಲ್ಲಿ ವಿದ್ಯಾರ್ಥಿಯ ಅವಧಾನವನ್ನು ಸೆಳೆಯುವ ಕಲಿಕಾ ಮಾದರಿ

(1) ತೊಡಗಿಸುವ ಹಂತ
(2) ಅನ್ವೇಷಣಾ ಹಂತ
(3) ವಿವರಣಾ ಹಂತ
(4) ಮೌಲ್ಯಮಾಪನ ಹಂತ

**SPACE FOR ROUGH WORK**

**KANNADA MEDIUM**

**PART – V**

**ಪರಿಸರ ವಿಜ್ಞಾನ**


**ENVIRONMENTAL SCIENCE**

**121.** ಬದಲಾಯಿಸಬಹುದಾದ ರೋಧದ ಚಿಹ್ನೆ

(1) 

(2) 

(3) 

(4) 

**122.** ಇವುಗಳಲ್ಲಿ ವಿದ್ಯುತ್ ವಾಹಕ ವಸ್ತು

(1) ಪೆನ್ಸಿಲ್ ಲೆಡ್

(2) ಗಾಜಿನ ಬಳೆ

(3) ಪ್ಲಾಸ್ಟಿಕ್ ಅಳತೆ ಪಟ್ಟಿ

(4) ರಬ್ಬರ್

**123.** ''ಗಾಜನ್ನು ಕನ್ನಡಕಗಳ ತಯಾರಿಕೆಯಲ್ಲಿ ಬಳಸುತ್ತಾರೆ.'' ಏಕೆಂದರೆ ಗಾಜು ಒಂದು

(1) ಸ್ವಯಂ ಪ್ರಕಾಶ ವಸ್ತು

(2) ಅಪಾರದರ್ಶಕ ವಸ್ತು

(3) ಅರೆಪಾರದರ್ಶಕ ವಸ್ತು

(4) ಪಾರದರ್ಶಕ ವಸ್ತು

**124.** ಪಕ್ಷಿಯೊಂದರ ಜವ 360 km/h ಆಗಿದೆ, ಇದನ್ನು m/s ನಲ್ಲಿ ವ್ಯಕ್ತಪಡಿಸಿದಾಗ


(1) 360 m/s


(2) 3600 m/s


(3) 100 m/s


(4) 1000 m/s

125. ಕೆಳಗಿನ ದೂರ–ಕಾಲ ನಕ್ಷೆಗಳಲ್ಲಿ ಯಾವುದು ಸ್ಥಿರವಾದ ಜವದೊಂದಿಗೆ ಚಲಿಸುತ್ತಿರುವ ಕಾರಿನ ಚಲನೆಯನ್ನು ತೋರಿಸುತ್ತದೆ ?

(1)



(2)



(3)



(4)



126. 'ಹಿಂದಕ್ಕೆ–ಮುಂದಕ್ಕೆ ಚಲಿಸುವ' ವಸ್ತುವಿನ ಚಲನೆಯ ವಿಧ

(1) ವೃತ್ತೀಯ ಚಲನೆ
(2) ಆಂದೋಲನ ಚಲನೆ
(3) ರೇಖೀಯ ಚಲನೆ
(4) ಉರುಳು ಚಲನೆ

127. ''ಕಾಗದದ ಹಾಳೆಯೊಂದಿಗೆ ಉಜ್ಜಿದ ಸ್ಟ್ರಾ ಮತ್ತೊಂದು ಸ್ಟ್ರಾವನ್ನು ಆಕರ್ಷಿಸುತ್ತದೆ.'' ಈ ಸಂದರ್ಭದಲ್ಲಿ ಕಂಡುಬರುವ ಬಲದ ವಿಧ

(1) ಸ್ನಾಯು ಬಲ
(2) ಗುರುತ್ವಾಕರ್ಷಣ ಬಲ
(3) ಸ್ಥಾಯಿವಿದ್ಯುತ್ ಬಲ
(4) ಕಾಂತೀಯ ಬಲ

128. ಮ್ಯಾಗ್ನಟೈಟ್‌ನಲ್ಲಿರುವ ಪ್ರಮುಖ ಧಾತು

(1) ಚಿನ್ನ
(2) ಬೆಳ್ಳಿ
(3) ಕಬ್ಬಿಣ
(4) ತಾಮ್ರ

129. ಲೋಹದ ಕಾರ್ಬೋನೇಟ್‌ಗಳು ಆಮ್ಲದೊಂದಿಗೆ ವರ್ತಿಸಿದಾಗ ಬಿಡುಗಡೆಯಾಗುವ ಅನಿಲ

(1) ಹೈಡ್ರೋಜನ್
(2) ಕಾರ್ಬನ್ ಡೈಆಕ್ಸೈಡ್
(3) ಆಕ್ಸಿಜನ್
(4) ಕಾರ್ಬನ್ ಮೊನಾಕ್ಸೈಡ್



www.questionpapersdownload.com

**130.** ಹೆಚ್ಚು ಕುಟ್ಯತೆ ಮತ್ತು ತನ್ಯತೆ ಗುಣವುಳ್ಳ ಲೋಹ

(1) Zn (2) Cu (3) Au (4) Hg

**131.** ಲೋಹಾಭಗಳಿಗೆ ಒಂದು ಉದಾಹರಣೆ

(1) ಲಿಥಿಯಂ (2) ಅಯೋಡಿನ್

(3) ಜರ್ಮೇನಿಯಂ (4) ಕ್ಸೆನಾನ್

**132.** ಅಮೋನಿಯಾದಲ್ಲಿ ನೈಟ್ರೋಜನ್ ಮತ್ತು ಹೈಡ್ರೋಜನ್‌ಗಳ ರಾಶಿಯ ಅನುಪಾತ

(1) 3 : 14 (2) 14 : 3 (3) 1 : 3 (4) 3 : 1

**133.** ಎರಡು ಹ್ಯಾಲೋಜನ್ ಧಾತುಗಳನ್ನು ಹೊಂದಿರುವ ಕಾರ್ಬನ್ ಸಂಯುಕ್ತ

(1) ಡಿ.ಡಿ.ಟಿ. (2) ಬಿ.ಹೆಚ್.ಸಿ. (3) ಸಿ.ಎಫ್.ಸಿ. (4) ಟಿ.ಎನ್.ಟಿ.

**134.** ಗಾತ್ರದ ಅಂತರರಾಷ್ಟ್ರೀಯ ಏಕಮಾನ

(1) Kg (2) $m^3$ (3) ಪಾಸ್ಕಲ್ (4) ವ್ಯಾಟ್

**135.** ಕುಡಿಯುವ ನೀರನ್ನು ಕ್ರಿಮಿಮುಕ್ತಗೊಳಿಸಲು ಬಳಸುವ ಲವಣ

(1) $CaOCl_2$ (2) NaOH

(3) $Na_2CO_3$ (4) $CaSO_4 \cdot \frac{1}{2} H_2O$

**136.** ಶುದ್ಧ ಪದಾರ್ಥಗಳ ದೊಡ್ಡ ಹರಳುಗಳನ್ನು ಅವುಗಳ ದ್ರಾವಣದಿಂದ ಪಡೆಯಬಹುದಾದ ಪ್ರಕ್ರಿಯೆ

(1) ಆವೀಕರಣ (2) ಬಾಷ್ಪವಿಸರ್ಜನೆ (3) ಉತ್ಪತನ (4) ಸ್ಫಟಿಕೀಕರಣ

**137.** ನಿರ್ದಿಷ್ಟ ಪ್ರದೇಶದಲ್ಲಿ ಮಾತ್ರ ಕಂಡುಬರುವ ಪ್ರಭೇದಗಳು

(1) ಅಪಾಯಕ್ಕೊಳಗಾದ ಪ್ರಭೇದಗಳು (2) ಸ್ಥಳೀಯ ಪ್ರಭೇದಗಳು

(3) ವಲಸೆ ಪ್ರಭೇದಗಳು (4) ಅಳಿದುಹೋದ ಪ್ರಭೇದಗಳು

**138.** ಜೈವಿಕ ವಿಘಟನೆಯಾಗುವ ವಸ್ತುಗಳನ್ನು ಮಾತ್ರ ಒಳಗೊಂಡಿರುವ ಗುಂಪು


(1) ಗಾಜು, ತರಕಾರಿ, ಚರ್ಮ

(2) ಕಾಗದ, ಹೂವು, ಪಿ.ವಿ.ಸಿ. ಪೈಪ್‌ಗಳು

(3) ಮರದ ತುಂಡು, ಪ್ಲಾಸ್ಟಿಕ್ ಚೀಲ, ತಾಮ್ರದ ತಂತಿ

(4) ಪ್ರಾಣಿ ತ್ಯಾಜ್ಯ , ಹುಲ್ಲು, ಹಣ್ಣಿನ ಸಿಪ್ಪೆ

139. ಕೊಟ್ಟಿರುವ ಚಿತ್ರದಲ್ಲಿನ ಜೀವಕೋಶಗಳ ವಿಧ



(1) ರಕ್ತಕಣಗಳು
(2) ಸ್ನಾಯುಕೋಶಗಳು
(3) ನರಕೋಶಗಳು
(4) ವೀರ್ಯಾಣು ಕೋಶಗಳು

140. ಭಾರತದ ದಕ್ಷಿಣ ತುತ್ತತುದಿಯನ್ನು ಈ ವಿಶೇಷ ಹೆಸರಿನಿಂದ ಗುರುತಿಸಲಾಗಿದೆ.
(1) ಇಂದಿರಾ ಪಾಯಿಂಟ್
(2) ಇಂದಿರಾ ಕೋಲ್
(3) ಗುವಾರ್ ಮೋಟ
(4) ಕಿಬಿತು

141. ಪೋಲಿಯೋ ರೋಗವನ್ನು ಉಂಟುಮಾಡುವ ಸೂಕ್ಷ್ಮಜೀವಿ
(1) ಪ್ರೋಟೋಜೋವಾ
(2) ಬ್ಯಾಕ್ಟೀರಿಯಾ
(3) ಶಿಲೀಂಧ್ರ
(4) ವೈರಸ್

142. ಕೊಯ್ಲಿನ ನಂತರ ಹುಲ್ಲುಗಳಿಂದ ಕಾಳುಗಳನ್ನು ಬೇರ್ಪಡಿಸುವ ಪ್ರಕ್ರಿಯೆ
(1) ಒಕ್ಕಣೆ
(2) ಬಿತ್ತನೆ
(3) ಕಳೆನಿವಾರಣೆ
(4) ಕೊಯ್ಲು

143. ಕೊಬ್ಬು ಸಂಪೂರ್ಣವಾಗಿ ಜೀರ್ಣವಾಗುವ ಮಾನವನ ಜೀರ್ಣಾಂಗವ್ಯೂಹದ ಭಾಗ
(1) ಜಠರ
(2) ಬಾಯಿ
(3) ಸಣ್ಣ ಕರುಳು
(4) ದೊಡ್ಡ ಕರುಳು

144. ಸಿಡುಬು ರೋಗಕ್ಕೆ ಲಸಿಕೆಯನ್ನು ಕಂಡುಹಿಡಿದವರು
(1) ಎಡ್ವರ್ಡ್ ಜೆನ್ನರ್
(2) ಅಲೆಗ್ಸಾಂಡರ್ ಫ್ಲೆಮಿಂಗ್
(3) ಲೂಯಿಸ್ ಪ್ಯಾಶ್ಚರ್
(4) ರಾಬರ್ಟ್ ಕೋಚ್

**145.** 3ನೇ ತರಗತಿಯಿಂದ 5ನೇ ತರಗತಿಯವರೆಗಿನ ಪರಿಸರ ವಿಜ್ಞಾನ ವಿಷಯದಲ್ಲಿ ಅಂತರ್ಗತವಾದ ವಿಷಯ

(1) ವಿಜ್ಞಾನದ ಪರಿಕಲ್ಪನೆಗಳು ಮತ್ತು ಸಮಸ್ಯೆಗಳು

(2) ವಿಜ್ಞಾನ ಮತ್ತು ಸಮಾಜವಿಜ್ಞಾನದ ಪರಿಕಲ್ಪನೆಗಳು ಮತ್ತು ಸಮಸ್ಯೆಗಳು

(3) ಸಮಾಜವಿಜ್ಞಾನದ ಪರಿಕಲ್ಪನೆಗಳು ಮತ್ತು ಸಮಸ್ಯೆಗಳು

(4) ವಿಜ್ಞಾನ ಮತ್ತು ಗಣಿತದ ಪರಿಕಲ್ಪನೆಗಳು ಮತ್ತು ಸಮಸ್ಯೆಗಳು

**146.** ಶಿಕ್ಷಕರು ವಿದ್ಯಾರ್ಥಿಯ ಕುಟುಂಬದ ಇತ್ತೀಚಿನ 'ಪ್ರಯಾಣ'ದ ವಿಷಯಕ್ಕೆ (ಥೀಮ್‌ಗೆ) ಸಂಬಂಧಿಸಿದಂತೆ ವಿದ್ಯಾರ್ಥಿಗಳಿಗೆ ಪ್ರಯಾಣದ ವಿವರಗಳನ್ನು ತರಲು ಹೇಳಿದರು ಮತ್ತು ಅವರು ತಮ್ಮ ತರಗತಿಯಲ್ಲಿ ಮತ್ತೊಂದು ಮಗುವಿನೊಂದಿಗೆ ಚರ್ಚಿಸಲು ಸೂಚಿಸಿದರು. ಈ ಸನ್ನಿವೇಶದಲ್ಲಿ ಶಿಕ್ಷಕರು ಬಳಸಿದ ತಂತ್ರ

(1) ಜಿಗ್-ಸಾ
(2) ಜೊತೆಯಾಗು-ಹಂಚಿಕೊಳ್ಳು (Pair-share)
(3) ದುಂಬಿ ಶಬ್ದ (Buzz)
(4) ಮೀನು-ಬುಟ್ಟಿ (Fish-bowl)

**147.** ಪರಿಶೋಧನಾ ಕ್ರಮದ ಮೂಲಕ ಪರಿಸರ ವಿಜ್ಞಾನವನ್ನು ಕಲಿಯಲು ಮಕ್ಕಳು ಸಾಕಷ್ಟು ಅವಕಾಶವನ್ನು ಪಡೆದುಕೊಳ್ಳುತ್ತಾರೆ. ಇದು ಸೂಚಿಸುವುದು

(1) ಪರಿಸರ ವಿಜ್ಞಾನವನ್ನು ಕಂಠಪಾಠದ ಮೂಲಕ ಕಲಿಯುವುದು

(2) ಪರಿಸರ ವಿಜ್ಞಾನವನ್ನು ಮಾಹಿತಿಯ ಮೂಲಕ ಕಲಿಯುವುದು

(3) ಪರಿಸರ ವಿಜ್ಞಾನವು ಶಿಶು-ಕೇಂದ್ರಿತವಾದುದು

(4) ಪರಿಸರ ವಿಜ್ಞಾನವು ಶಿಕ್ಷಕ-ಕೇಂದ್ರಿತವಾದುದು

**148.** ಗುಂಪು ಚಟುವಟಿಕೆಯ ಮೌಲ್ಯವನ್ನು ವೃದ್ಧಿಸುವ ಪರಿಕಲ್ಪನೆಗಳು ಮತ್ತು ತಂತ್ರಗಳು

(1) ಸಹಕಾರಿ ಕಲಿಕೆ
(2) ಸಹಭಾಗಿ ಕಲಿಕೆ
(3) ಸಾಂಸ್ಥಿಕ ಕಲಿಕೆ
(4) ಸಾಂಪ್ರದಾಯಿಕ ಕಲಿಕೆ

**149.** ಪ್ರಾಥಮಿಕ ಹಂತದ ಪರಿಸರ ವಿಜ್ಞಾನದ ಕಲಿಕೆಯಲ್ಲಿನ ಘಟಕಾಂಶಗಳು

(1) ತಯಾರಿಕೆ, ಪ್ರಸ್ತುತಿ ಮತ್ತು ಉತ್ಪನ್ನ
(2) ತಯಾರಿಕೆ, ಪ್ರಕ್ರಿಯೆ ಮತ್ತು ಉತ್ಪನ್ನ
(3) ತಯಾರಿಕೆ, ಪ್ರಸ್ತುತಿ ಮತ್ತು ಪ್ರಕ್ರಿಯೆ
(4) ತಯಾರಿಕೆ, ಉತ್ಪನ್ನ ಮತ್ತು ಸಂಪನ್ನತೆ

**150.** ಪರಿಸರ ವಿಜ್ಞಾನವನ್ನು ಸೂಕ್ತವಾಗಿ ಬೆಂಬಲಿಸುವ ಹೇಳಿಕೆ

A. ಇದು ಅಮೂರ್ತ ಕಲ್ಪನೆಗಳನ್ನು ಅರ್ಥಮಾಡಿಕೊಳ್ಳಲು ವಿದ್ಯಾರ್ಥಿಗೆ ಅನುವು ಮಾಡಿಕೊಡುತ್ತದೆ.

B. ಇದು ಪ್ರಾಯೋಗಿಕ ಜ್ಞಾನವನ್ನು ಒದಗಿಸುತ್ತದೆ.

C. ಇದು ಮಕ್ಕಳಿಗೆ ಜ್ಞಾನವನ್ನು ಅನ್ವಯಿಸುವ/ಬಳಸುವುದನ್ನು ಅನುಕೂಲಿಸುವುದಿಲ್ಲ.

(1) A ಮತ್ತು B
(2) A ಮತ್ತು C
(3) B ಮತ್ತು C
(4) A, B ಮತ್ತು C